# ಮಾನಸ ಗಂಗೋತ್ರಿ

ದಸರಾ ವಿಶೇಷಾಂಕ

ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ಸೋಮವಾರ 10-10-2022 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮೈಸೂರು ವಿ ವಿ | gmail id-pgjmc2019@gmil.com


# ಜಂಬೂಸವಾರಿಯಲ್ಲಿ ರಾರಾಜಿಸಿದ ನಾಡದೇವತೆ

## ಮೆರವಣಿಗೆಯಲ್ಲಿ 48 ಸ್ತಬ್ಧಚಿತ್ರಗಳು 62 ಜನಪದ ಕಲಾತಂಡಗಳು ಭಾಗಿ

**ಮೈಸೂರು, ಅ.5–** ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ವಿಜಯದಶಮಿ ಜಂಬೂ ಸವಾರಿ ಮೆರವಣಿಗೆ ಬುಧವಾರ ಯಶಸ್ವಿಯಾಗಿ ನೆರವೇರಿತು.

ಐತಿಹಾಸಿಕ ನವರಾತ್ರಿ ಉತ್ಸವದ ಪ್ರಮುಖ ಘಟ್ಟಕ್ಕೆ ಲಕ್ಷಾಂತರ ಮಂದಿ ಸಾಕ್ಷಿಯಾದರು. ಮೈಸೂರು ಅರಮನೆಯ ಉತ್ತರ ದ್ವಾರದ ಶ್ರೀಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಮಧ್ಯಾಹ್ನ 2.40 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಂದಿ ದ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಜಯದಶಮಿ ಮೆರವಣಿಗೆಗೆ ಚಾಲನೆ ನೀಡಿದರು.

ಬಳಿಕ ಅರಮನೆ ಆವರಣದಿಂದ ಅರ್ಜುನ ನೇತೃತ್ವದ ನಿಶಾನೆ ಆನೆಗಳಾದ ಮಹೇಂದ್ರ, ಭೀಮ, ಧನಂಜಯ, ಗೋಪಾಲಸ್ವಾಮಿ ಹಾಗೂ ಗೋಪಿ ಮೆರವಣಿಗೆಯಲ್ಲಿ ಸಾಗಿದವು. ನಂತರ 750 ಕೆಜಿ ತೂಕದ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಸಂಜೆ 5.37 ಗಂಟೆಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ನೆರವೇ–ರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲೆಯ ಮಹಾಪೌರರು, ಪೊಲೀಸ್ ಆಯುಕ್ತರು ಮತ್ತು ರಾಜರಾದ ಯದುವೀರ್ ಒಡೆಯರು ಕೂಡ ಭಾಗಿಯಾಗಿದ್ದರು.

ಈ ಮೊದಲು ಸಂಜೆ 5.07 ರಿಂದ 5.18 ರವರಿಗೆ ಸಲ್ಲಿಸುವ ಶುಭ ಮೀನ ಲಗ್ನದಲ್ಲಿ ಪುಷ್ಪಾರ್ಚನೆ ನೆರವೇರಿಸಲು ಬೇಳೆ ನಿಗದಿಯಾಗಿತ್ತು, ಸುಮಾರು, 30 ನಿಮಿಷಗಳ ಕಾಲ ತಡವಾಗಿ ಈ ಬಾರಿ ವಿಜಯದಶಮಿ ಮೆರವಣಿಗೆ ಆರಂಭವಾಯಿತು. ಅಲಂಕೃತ ಚಿನ್ನದ ಅಂಬಾರಿ ಎಲ್ಲಿ ವಿರಾಜಮಾನಳಾಗಿದ್ದ ಆದಿದೇವತೆ



ಅಂಬಾರಿಯಲ್ಲಿ ವಿರಾಜಮಾನಳಾದ ಚಾಮುಂಡೇಶ್ವರಿ ಮೂರ್ತಿಗೆ ಮುಖ್ಯಮಂತ್ರಿ,ಬಸವರಾಜಬೊಮ್ಮಾಯಿ ಪುಷ್ಪಾರ್ಚನೆ ನೆರವೇರಿಸಿದರು,ಹಾಗೂ ಮಹಾರಾಜ ಯದುವೀರ್, ಸಚಿವಸೋಮಶೇಖರ,ಸುನೀಲ್ ಕುಮಾರ, ಮಹಾಪೌರ ಶಿವುಕುಮಾರ ,ಜಿಲ್ಲಾಧಿಕಾರಿ ಬಗಾದಿ ಗೌತಮ್, ನಗರ ಪೋಲಿಸ್ ಆಯುಕ್ತ ಚಂದ್ರಗುಪ್ತ ಉಪಸ್ಥಿತರಿದ್ದರು

ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಹೊತ್ತು ಅಭಿಮನ್ಯು ಅರಮನೆ ಆವರಣದಲ್ಲಿ ಅಡಿಯಿಡುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಮಂದಿ ಕಣ್ತುಂಬಿಕೊಂಡು ಭಕ್ತಿಪರವಶರಾಗಿ, ಕೈಮುಗಿದರು. ಮುಖ್ಯಮಂತ್ರಿಗಳು ಪುಷ್ಪಾರ್ಚನೆ ನೆರವೇರಿಸುತ್ತಿದ್ದಂತೆಯೇ ಅರಮನೆ ಆವರಣದಲ್ಲಿ ರಾಷ್ಟ್ರಗೀತೆ ಮೊಳಗಿತು. ಇದೇ ವೇಳೆ 21 ಸುತ್ತು ಕುಶಲ ತೋಪುಗಳನ್ನು ಸಿಡಿಸಲಾಯಿತು. ಈ ವೇಳೆ ನಡೆದಿದ್ದ ಸಹಸ್ರಾರು ಮಂದಿ ಎದ್ದು ನಿಂತು ನಾಡ ದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಗೌರವ ಸಮರ್ಪಿಸಿದ್ದರು. ಹಸಿರು ಸೀರೆ ಧರಿಸಿ, ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಿದ್ದ ಆದಿದೇವತೆಯನ್ನು ಚಿನ್ನದ ಅಂಬಾ–ರಿಯಲ್ಲಿ ಹೊತ್ತು ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕಿದ. ಎಡಭಾಗಕ್ಕೆ ಚೈತ್ರ ಹಾಗೂ ಬಲಬದಿ ಕಾವೇರಿ ಅಭಿಮನ್ಯುವಿಗೆ ಮೆರವಣಿಗೆಯಲ್ಲಿ ಸಾತ್ ನೀಡಿದವು. ಅರಮನೆ ಆವರಣದಿಂದ ಹೊರಟ ಅಭಿಮನ್ಯು

### ಸಿಎಂ ಕೊಟ್ಟ ಹಸಿರು ಸೀರೆ

ಜಂಬೂಸವಾರಿಯ ಮೆರವಣಿಗೆಯ ಚಿನ್ನದ ಅಂಬಾ–ರಿಯಲ್ಲಿ ಪ್ರತಿಷ್ಟಾಪಿಸಿದ ಚಾಮುಂಡೇಶ್ವರಿ ಮೂರ್ತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ್ದ ಹಸೀರು ರೇಷ್ಮೆಸೀರೆಯನ್ನು ತೊಡಿಸಲಾಗಿ–ತ್ತು.ಆದರೆ ಪ್ರತಿ ಬಾರಿ ಮೇಯರ ಕೊಡಿಸುವ ಸೀರೆಯನ್ನು ತೊಡಿಸುವುದು ಸಂಪ್ರದಾಯವಾಗಿತ್ತು ಆದರೆ ಈ ಬಾರಿಯ ಬದಲಾವಣೇ ಜನರಲ್ಲಿ ಅಚ್ಚರಿ ಯನ್ನು ಮೂಡಿಸಿತು.

ನಿರಾಳವಾಗಿ ಹೆಜ್ಜೆ ಹಾಕಿ, ರಾಜ ಮಾರ್ಗವಾದ ಚಾಮರಾಜ ವೃತ, ಕೆ ಆರ್ ಸರ್ಕಲ್, ಸಯಾಜಿ ರಾವ್ ರಸ್ತೆ, ಬಂಬೂ ಬಜಾರ್, ಹೈವೇ ಸರ್ಕಲ್ ಮೂಲಕ ರಾತ್ರಿ 8.05ಕ್ಕೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿತು.

ಮೆರವಣಿಗೆ ವೇಳೆಯಲ್ಲಿ ಮಾರ್ಗದುದ್ದಕ್ಕೂ ಕಟ್ಟಡ, ಮರಗಳ ಮೇಲೆ ನಿಂತು ಲಕ್ಷಾಂತರ ಮಂದಿ ಈ ವೈಭವ ಐತಿಹಾಸಿಕ ಜಂಬೂ ಸವಾರಿ ಮೆರವಣಿಗೆಯನ್ನು ವೀಕ್ಷಿಸಿದರು. ಇದಕ್ಕೂ ಮೊದಲು ನಿಶಾನೆ ಆನೆಗಳೊಂದಿಗೆ ವೀರಗಾಸೆ, ನಾದಸ್ವರ ವಾದನ, ನಂದಿಧ್ವಜ ಸೇರಿದಂತೆ 48 ಸ್ತಬ್ಧ ಚಿತ್ರಗಳು ಹಾಗೂ 62 ವಿವಿಧ ಜಾನಪದ ಕಲಾತಂಡಗಳು, ಇಂಗ್ಲಿಷ್ ಬ್ಯಾಂಕ್, ಪೋಲಿಸ್ ಅಶ್ವದಳ, ಫಿರಂಗಿ ಗಾಡಿಗಳು, ಅರಣ್ಯ ಇಲಾಖೆ ವೈದ್ಯರ ತಂಡ, ಅಗ್ನಿಶಾಮಕ ಸಿಬ್ಬಂದಿ ಹಾಗೂ ತುರ್ತು ಚಿಕಿತ್ಸೆ ವಾಹನಗಳು ಮೆರವಣಿಗೆಯಲ್ಲಿ ಸಾಗಿದವು. ಈ ಬಾರಿಯ ಜಂಬೂಸವಾಡಿಗೆ ಲಕ್ಷಾಂತರ ಜನರು ಸಾಕ್ಷಿಯಾದರು.

–ಪವಿತ್ರ.ವಿ

## ಪಂಜಿನ ಕವಾಯತು ಜೊತೆಯಲ್ಲಿ ಡ್ರೋಣ್ ಕ್ಯಾಮರಾ ಮೋಡಿ

### ಕೊರೊನಾ ಕಾರಣದಿಂದ ಕವಾಯತ್ತಿನಲ್ಲಿ ರಾಜ್ಯಪಾಲರು ಗೈರು.

**ಮೈಸೂರು,** ಅದು.5–ಪ್ರತಿ ಬಾರಿಯ ರೀತಿಯೇ ಈ ಬಾರಿಯೂ ಪಂಜಿನ ಕವಾಯತು ಮೂಲಕಾ ಮೈಸೂರು ದಸರಾಗೆ ತೆರೆ ಎಳೆಯಲಾಯಿತು.

ಅತ್ಯಾಕಶ್ಯಕ ಪಂಜಿನ ಕವಾಯತು ಜೊತೆಯಲ್ಲಿ ಡ್ರೋಣ್ ಕ್ಯಾಮರಾ ಮೋಡಿ, ಬಾಣ ಬಿರುಸುಗಳ ಬಣ್ಣ ಬಣ್ಣದ ಚಿತ್ತಾರದೊಂದಿಗೆ ವೈಭವದ ಮೈಸೂರು ದಸರಾ ಮಹೋತ್ಸವಕ್ಕೆ ಬುಧವಾರ ವರ್ಣ ರಂಜಿತ ತೆರೆ ಬಿದ್ದಿತು.

ಜಂಬೂ ಸವಾರಿ ಮೆರವಣಿಗೆ ಸಂಪನ್ನಗೊಂಡ ಬಳಿಕ ಬನ್ನಿ ಮಂಟಪ ಮೈದಾನದಲ್ಲಿ ನಡೆದ ವೈವಿಧ್ಯಮಯ ಕಾರ್ಯಕ್ರಮದಲ್ಲಿ ಕಿಕ್ಕಿರಿದ ಸೇರಿದಜನ ಸಮುದಾಯ, ಈ ಬಾರಿ ಸೈನಿಕ ಮೋಟರ್ ಬೈಕ್ ಸಾಹಸ ಪ್ರದರ್ಶನ ಇರಲಿಲ್ಲವಾದರೂ ಇದೇ ಮೊದಲ ಬಾರಿ ಪ್ರಸ್ತುತಗೊಂಡ "ಡ್ರೋಣ್ ಶೂಟ್" ವಿಭಿನ್ನ ಕಾರ್ಯಕ್ರಮ ಪ್ರೇಕ್ಷಕರ ಬೇಸರ ಸರಿಸಿತು.

ಕೊರೊನಾ ಕಾರಣದಿಂದ ರಾಜ್ಯಪಾಲರು ಈ ಬಾರಿ ಪಂಜಿನ ಕವಾಯತಿಗೆ ಗೈರಾಗಿದ್ದರು. ಹಾಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ



ಅತ್ಯಾಕರ್ಶಕ ಪಂಜಿನ ಕವಾಯತು ಜೊತೆಯಲ್ಲಿ ಡ್ರೋಣ್ ಕ್ಯಾಮರಾಗಳಲ್ಲಿ ಅಂಬಾರಿ ಹೊತ್ತ ಅಭಿಮನ್ಯುವಿನ ಚಿತ್ರಣದ ವೈಭವ ಮೈಸೂರು ದಸರಾ ಮಹೋತ್ಸವಕ್ಕೆ ಬುಧವಾರ ವರ್ಣ ರಂಜಿತ ತೆರೆ ಬಿದ್ದಿತು.

ಸಚಿವ ಸುನಿಲ್ ಕುಮಾರ್ ಇನ್ನಿತರ ಸ್ಥಳೀಯ ಜನಪ್ರತಿನಿಧಿಗಳನ್ನೊಳಗೊಂಡಂತೆ ಗಣ್ಯರ ಆಗಮನವಾದ ನಂತರರಾತ್ರಿ 8.10ಕ್ಕೆ ಕಾರ್ಯಕ್ರಮ ಆರಂಭವಾಯಿತು.

ಅಶ್ವರೋಹಿ ದಳದ ಪ್ರಧಾನ ದಳಪತಿ, ನಾಗರಾಜು ಅವರು ಗಣ್ಯರಿಗೆ ಗೌರವ ವಂದನೆ ಸಲ್ಲಿಸಿ, 'ಪಂಜಿನ ಕವಾಯತು ತುಕಡಿಗಳು ತಮ್ಮ ಪರಿವೀಕ್ಷಣೆಗೆ ಆಹ್ವಾನಿವಾನಿಸಿದರು.

ನಂತರ ಮುಖ್ಯಮಂತ್ರಿ ಬೊಮ್ಮಾಯಿ ಯವರು ತೆರೆದ ವಾಹನದಲ್ಲಿ ಮೈದಾನ ಸುತ್ತು ಹಾಕಿ ನಿಶ್ಚಲ ತುಕಡಿಗಳ ಪರಿವೀಕ್ಷಣೆ ನಡೆಸಿದರು. ಸಚಿವರಾದ ಎಸ್ ಟಿ ಸೋಮಶೇಖರ್, ಸುನಿಲ್ ಕುಮಾರ್, ನಗರ ಪೊಲೀಸ್ ಆಯುಕ್ತ ಡಾ ಚಂದ್ರಗುಪ್ತ ಮುಖ್ಯಮಂತ್ರಿಗಳೊಂದಿಗಿದ್ದರು.

_ಪವಿತ್ರ. ವಿ

## ಹೊಸ ಇತಿಹಾಸ ಸೃಷ್ಟಿಸಿದ ದಸರಾ ಉದ್ಘಾಟನೆ



ಮೈಸೂರು;ಐತಿಹಾಸಿಕ ಮೈಸೂರು ದಸರೆಗೆ ರಾಷ್ಟಪತಿ ದ್ರೌಪದಿ ಮು ರ್ಮು ಅವರು 413ನೇ ಮೈಸೂರು ದಸರಾಗೆ ಚಾಲನೆ ನೀಡಲು ರಾಷ್ಟ ಪತಿ ವೇದಿಕೆಗೆ ಬರುತ್ತಿದ್ದಂತೆ ಸಭಿಕ–ರಿಂದ ಜೋರಾದ ಕರತಡವದಿಂದ ಸ್ವಾಗತ ದೂರತ ನಂತರ, ದೀಪ ಬೆಳಗಿಸಿ, ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ದಸರಾ ಉದ್ಘಾಟಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ರೇಷ್ಮೆ ಪೇಟ, ಹಾರ ಹಾಗು ಬೆಳ್ಳಿಯ ಚಾಮುಂಡೇಶ್ವರಿ ವಿಗ್ರಹವನ್ನು ಸ್ವೀಕರಿಸಿದ ನಂತರ ಮಾತನಾಡಿ ರಾಷ್ಟಪತಿ ದ್ರೌಪದಿ ಮುರ್ಮು ಕನ್ನಡದಲ್ಲೇ ಭಾಷಣ ಆರಂಭಿಸಿ ದೇವಿ ಚಾಮುಂಡೇಶ್ವರಿಗೆ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲೇ ಹೇಳಿದರು. ಅಲ್ಲದೆ, ಮೈಸೂರು ದಸರಾ ಭಾರತೀಯ ಸಂಸ್ಕೃತಿಯ ಪ್ರತೀಕ, ತಾಯಿಯ ಆಶೀರ್ವಾದ ಎಲ್ಲರ ಮೇಲಿರಲಿ ಎಂದು ದೌಪದಿ ಮುರ್ಮು ಹೇಳಿದರು.

ಕರ್ನಾಟಕದ ಸಂಸ್ಕೃತಿ ವಿಶ್ವ ವ್ಯಾಪಿಯಾಗಿದ್ದು, ದಸರಾ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹೋಟ್, ಉಸ್ತುವರಿ ಸಚಿವ ಶ್ರೀ ಎಸ್.ಟಿ.ಸೋಮಶೇಖರ್, ಇಂಧನ ಹಾಗು ಕನ್ನಡ ಸಂಸ್ಕೃತಿ ಸಚಿವರಾದ ಶ್ರೀ ಸುನಿಲ್ ಕುಮಾರ್, ಕೇಂದ್ರ ಸಚಿವರುಗಳಾದ ಶ್ರೀ ಪ್ರಹ್ಲಾದ್ ಜೋಷಿ ಹಾಗು ಕುಮಾರಿ ಶೋಭಾ ಕರಂದ್ಲಾಜೆ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

–ಚಿನ್ಮಯ ವಿಶ್ವಸೇನ

# ದಸರಾ ಕವಿಗೋಷ್ಠಿ



## ಕನ್ನಡದ ಕಾವ್ಯ ಭಾರತದ ಎಲ್ಲ ಭಾಷೆಗಿಂತ ವಿಶಿಷ್ಟ; ಕಂಬಾರ

**ಮೈಸೂರು;**ನಾಡಹಬ್ಬದಸರಾ ಮಹೋತ್ಸವದ ಅಂಗವಾಗಿ ದಸರಾ ಕವಿಗೋಷ್ಠಿ ಉಪಸಮಿತಿ ವತಿ ಯಿಂದ ಮಾನಸ ಗಂಗೋತ್ರಿ ಸೆನೆಟ್ ಸಭಾಂಗಣದಲ್ಲಿ ಆಯೋ ಜಿಸಿದ 'ಪ್ರಧಾನ ಕವಿಗೋಷ್ಠಿ' ಕಾರ್ಯ ಕ್ರಮವನ್ನು ಜ್ಞಾನಪೀಠ ಪ್ರಶಸ್ತಿ ಪುರ ಸ್ಕೃತರಾದ ಚಂದ್ರಶೇಖರ್ ಕಂಬಾರ್ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದವರು ಕನ್ನಡ ಕಾವ್ಯ ಭಾರತದ ಯಾವುದೇ ಭಾಷೆಯ ಕಾವ್ಯ ಕಿಂತಲೂ ವಿಶಿಷ್ಟವಾಗಿ ಬೆಳೆದು ಬಂದಿದ್ದು, ಕನ್ನಡದ ಕವಿಗಳು ಮುಂಚೂಣಿಯಲ್ಲಿದ್ದಾರೆ ನಮಗೆ ಯಾವ ಶಿಕ್ಷಣ ನೀಡಬೇಕು ಎಂಬುದು ಬ್ರಿಟಿಷರು ನಿರ್ಧರಿಸಿದ್ದರಿಂದ ಪ್ರಾಥ ಮಿಕ ಮಾಧ್ಯಮಿಕ ಹಾಗೂ ಯೂನಿವರ್ಸಿಟಿ ಅಂತ ಶಿಕ್ಷಣ ಜಾ–ರಿಗೆ ಬಂತು ಎಂದು ಜಲಗಾರ ಎಂಬ ಕವಿತೆಯನ್ನು ವಾಚನ ಮಾಡಿ, ಕವನ ವಾಚನ ಮಾಡಲು ಆಗಮಿಸಿದ ಕವಿಗಳಿಗೆ ಶುಭ ಹಾರೈಸಿದರು.

ಬಳಿಕ ಉಸ್ತುವಾರಿ ಸಚಿವರಾದ ಎಸ್.ಟಿ ಸೋಮಶೇಖರ್ ಮಾತನಾಡಿ ಕವಿಗೋಷ್ಠಿಯನ್ನು ಬಹಳ ವ್ಯವ ಸ್ಥಿತವಾಗಿ ಆಯೋಜಿಸಲಾಗಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಚಂದ್ರಶೇಖರ್ ಕಂಬಾರ್ ಅವರು ಉಪಸ್ಥಿತಿಯೂ ನಿಜಕ್ಕೂ ಸಂತೋಷವನ್ನುಂಟು ಮಾಡಿದೆ ಎಂದರು.



**ಚಂದ್ರಶೇಖರ ಕಂಬಾರ ಕಾರ್ಯಕ್ರಮ ಉದ್ಘಾಟಿಸಿದರು ಜೊತೆಗೆ ಮೇಯರ್ ಶಿವಕುಮಾರ್ ಕವಿಗೋಷ್ಠಿ ಉಪಸಮಿತಿ ಅಧ್ಯಕ್ಷರಾದ ಸಿ ಬಿ ಬಸವರಾಜಪ್ಪ ಉಪ ವಿಶೇಷಾಧಿಕಾರಿ ಎಂ.ದಾಸೇಗೌಡ ಇತರರು ಉಪಸ್ಥಿತರಿದ್ದರು.**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕವಿ ನಾಟಕಕಾರನಾದ ಡಾ. ಎಚ್. ಜೆ.ಶಿವಪ್ರಕಾಶ್ ಅವರು ಮಾತನಾಡಿ ಸಂತೋಷದ ವಿಷಯ ಎಂದರೆ ಹದಿನೈದು ವರ್ಷದ ಹಿಂದಿಗಿಂತ ಇದು ಕವಿಗಳು ಸಂಖ್ಯೆ ಜಾಸ್ತಿಯಾಗಿದೆ ಅನೇಕ ಜನ ಯುವಕವಿಗಳು ಎಲ್ಲಾ ವರ್ಗಗಳಿಂದ ಸಶಕ್ತವಾಗಿ ಕಾವ್ಯ ವಿಭಕ್ತಿ ಮಾಡುತ್ತಿದ್ದಾರೆ ಕನ್ನಡ ಕಾವ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಕವಿಗೋಷ್ಠಿ ಉಪ ಸಮಿತಿ ಅಧ್ಯಕ್ಷರಾದ ಸಿ ಬಿ ಬಸವರಾಜಪ್ಪ ಉಪ ವಿಶೇಷಾಧಿಕಾರಿ ಎಂ.ದಾಸೇಗೌಡ ಇತರರು ಉಪಸ್ಥಿತ–ರಿದ್ದರು.

**ಅರ್ಪಿತಾ.ಎನ್.ಎನ್**

## ವಿಶ್ವ ಮಾನವತೆಯ ಸಾಹಿತ್ಯ ರಚನೆಯಾಗಲಿ

**ಮೈಸೂರು;** ಯುವ ಕವಿಗಳಿಂದ ವಿಶ್ವ ಮಾನವತೆ ಬಲಪಡಿಸುವ ಸಾಹಿತ್ಯ ರಚನೆಯಾಗಲಿ. ಎಂದು ಶಾಸಕ ಜಿ ಟಿ ದೇವೇಗೌಡ ಕರೆ ನೀಡಿದರು.

ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಯುವ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದ ನಾನಾ ಮೂಲೆಗಳಿಂದ ಎಲೆ ಮರೆಕಾಯಿಯಂತಿ–ರುವ ಯುವ ಕವಿಗಳನ್ನು ಗುರುತುಸಿ ಇಲ್ಲಿ ಕವಿತೆ ವಾಚನಕ್ಕೆ ಅವಕಾಶ ಮಾಡಿಕೊಟ್ಟಿರುವುದು ತುಂಬಾ ಉತ್ತಮ ವಾದ ಕೆಲಸ,ಇನ್ನೂ ಹಲವಾರು ಅವಕಾಶ ವಂಚಿತ ಕವಿಗಳಿದ್ದಾರೆ ಅವರನ್ನ ಮುನ್ನೆಲೆಗೆ ತರುವುದು ನಮ್ಮ ಕರ್ತವ್ಯ.

ಸಾಹಿತ್ಯಕ್ಕೆ ಸಮಾಜ ಬದಲಾಯಿಸುವ ಶಕ್ತಿಯಿದೆ. ಕುವೆಂಪು, ಬೇಂದ್ರೆ, ಕಾರಂತರಂತಹ ಹಿರಿಯ ಸಾಹಿತಿಗಳನ್ನು ಯುವ ಸಾಹಿತಿಗಳು ಸ್ಪೂರ್ತಿ ಯಾಗಿಸಿಕೊಂಡು ನೆಲ, ಜಲ, ಭಾಷೆ ಸಂರಕ್ಷಿಸುವ ಕೆಲಸ ಮಾಡಬೇಕು. ಜೀವನ ಮೌಲ್ಯಗಳನ್ನು ಬೆಳೆಸುವ ಹಾಗೂ ಸಾಮಾಜಿಕ ನೆಲೆಯಲ್ಲಿ ಸಾಹಿತ್ಯ ರಚಿಸುವ ಜವಾಬ್ದಾರಿ ನಮ್ಮ ಈ ಯುವ ಕವಿಗಳ ಮೇಲಿದೆ. ಈ ನಿಟ್ಟಿನಲ್ಲಿ ಯುವ ಕವಿಗಳು ಕವಿತೆಗಳನ್ನು ರಚಿಸಬೇಕು ಎಂದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಸಾಹಿತಿ ಎಚ್.ಎಸ್.ವೆಂಕಟ ಮೂರ್ತಿ ಅವರು ಒಬ್ಬ ಮನುಷ್ಯ, ಇನ್ನೊಬ್ಬ ಮನುಷ್ಯನೊಡನೆ ತಾರ್ಕಿಕವಾಗಿ ನಡೆಸುವ ಸಂವಾದವೇ ಕವಿತೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ರಾಜ್ಯದ ನಾನಾ ಭಾಗಗಳಿಂದ ಬಂದ ಯುವ ಕವಿಗಳು ತಮ್ಮ ಕವಿತೆಯನ್ನು ವಾಚಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕೃಷಿ ಸಚಿವ ಬಿ.ಸಿ.ಪಾಟೀಲ್, ಸಾಹಿತಿ ಡಾ. ಮಂಗಳಾ ಪ್ರಿಯದರ್ಶಿನಿ, ಮೇಯರ್ ಶಿವಕುಮಾರ್, ಇನ್ನಿತರರು ಉಪಸ್ಥಿತ–ರಿದ್ದರು

**–ರಂಜೀತ.ಎನ್.ಆರ್**

## ಜನಪದ ಸಂಸ್ಕೃತಿಗಳನ್ನು ಶೋಕೇಸ್ ಮಾಡಿಕೊಂಡಿದ್ದೇವೆ: ದೊಶೆಟ್ಟಿ

**ಮೈಸೂರು;**ನಮ್ಮ ಜನಪದ ಸಂಸ್ಕೃತಿಗಳನ್ನು ಶೋಕೇಸ್ ಮಾಡಿಕೊಂಡಿದ್ದೇವೆ. ಮೃಗಾಲಯದಲ್ಲಿ ಪ್ರಾಣಿಗಳನ್ನು ನೋಡಿದ ಹಾಗೆ ನಮ್ಮ ಜಾನಪದ ಸಂಸ್ಕೃತಿ ಭಾಸವಾಗುತ್ತಿದೆ.ಎಂದು ಎಂದು ಕವಯತ್ರಿ ನೂತನ ದೋಶಟ್ಟಿ ಕಳವಳ ವ್ಯಕ್ತಪಡಿಸಿದರು.

ಮೈಸೂರು ದಸರಾ ಅಂಗವಾಗಿ ಕವಿಗೋಷ್ಠಿ ಉಪಸಮಿತಿ ವತಿಯಿಂದ ನಗರದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರಾದೇಶಿಕ ಕವಿಗೋಷ್ಠಿಯ ಅಧ್ಯಕ್ಷತೆವಹಿಸಿ ಮಾತನಾಡಿದ ಕವಯಿತ್ರಿ ನೂತನ ದೋಶೆಟ್ಟಿ ಕವಿತೆಯನ್ನು ಓದುವಾಗ ಒಳಮನಸ್ಸನ್ನು ತೆರೆದು ಓದಬೇಕು, ಅಂತಯೇ ಕವಿತೆ ಕೇಳುವಾಗ ಒಳಕಿವಿಯನ್ನು ತೆರೆದು ಕವಿತೆ ಕೇಳಬೇಕು. ಆಗ ಕವಿತೆಯ ನಿಜವಾದ ಅರ್ಥ ನಮಗೆ ತಿಳಿಯುತ್ತದೆ ಎಂದರು.

ಕಳೆದ ಮೂರು ದಶಕಗಳಿಂದ ಪ್ರಾದೇಶಿಕ ಭಿನ್ನತೆ ತೀವ್ರವಾಗಿ ಬದಲಾಗಿದೆ. ಅವುಗಳು ಇವತ್ತಿಗೂ ಹಾಗೆ ಉಳಿದುಕೊಂಡಿದ್ದಾವಾ ಎಂದು ಪ್ರಶ್ನಿಸಬೇಕಿದೆ. ಬಹುತೇಕ ನಗರಗಳು ಮಹಲ್ ಮತ್ತು ಜಿಮ್ ಸಂಸ್ಕೃತಿಗೆ ಒಳಗಾಗಿವೆ. ಇನ್ನು ಚಿಕ್ಕ ಪಟ್ಟಣಗಳು ಕೂಡ ಬಹುತೇಕ ಇಂತಹ ಸಂಸ್ಕೃತಿ ನೆರಳನಲ್ಲಿವೆ. ಇನ್ನು ಹಳ್ಳಿಗಳಿಂದ ಜನರು ನಗರ, ಪಟ್ಟಣಕ್ಕೆ ವಲಸೆ ಹೋಗಿದ್ದಾರೆ. ಈ ಸಂದರ್ಭದಲ್ಲಿ ಪ್ರಾದೇಶಿಕ ಭಿನ್ನತೆ ಹೇಗೆ ಉಳಿಸಿಕೊಳ್ಳಲು ಸಾಧ್ಯ ಎಂದು ವಿಷಾಧಿಸಿದರು. ನಮ್ಮ ಜನಪದ ಸಂಸ್ಕೃತಿಗಳನ್ನು ಶೋಕೇಸ್ ಮಾಡಿಕೊಂಡಿದ್ದೇವೆ. ಮೈಸೂ–ರಿನ ಮೃಗಾಲಯದಲ್ಲಿ ಪ್ರಾಣಿಗಳನ್ನು ನೋಡಿದ ಹಾಗೆ ನಮ್ಮ ಜನಪದ ಸಂಸ್ಕೃತಿ ಭಾಷವಾಗುತ್ತಿದೆ. ಈ ಹಿನ್ನಲೆ ನಶಿಸುತ್ತಿರುವ ಪ್ರಾದೇಶಿಕ ಸಂಸ್ಕೃತಿ ಉಳಿವಿಗೆ ಸಾಹಿತ್ಯ ಅಗತ್ಯವಾಗಿದೆ ಎಂದರು.

ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ–ಎಸ್.ಟಿ.ಸೋಮಶೇಖರ್ ಕವಿಗೋಷ್ಠಿಯಲ್ಲಿ ಕವಿತೆ ವಾಚಿಸುತ್ತಿರುವುದು ದಸರಾದ ಮೆರುಗು ಹೆಚ್ಚಿಸಿದೆ. ಇಲ್ಲಿ ಕವಿತೆ ಆಲಿಸಬೇಕಾದರೆ ಅದೃಷ್ಟಮಾಡಿರಬೇಕು. ಕಾರ್ಯ ದೊತ್ತಡದಿಂದ ಆ ಅದೃಷ್ಟ ನನಗೆ ಇಲ್ಲ ಎಂದರು.



**ಮೈಸುರು ವಿಶ್ವ ವಿದ್ಯಾನಿಲಯದ ರಾಣಿಬಹದ್ದುರ ಸಭಾಂಗಣದಲ್ಲಿ ಆಯೋಜಿಸಿದ ಪ್ರಾದೇಶಿಕ ಕವಿಗೋಷ್ಠಿಯನ್ನು ಕವಯತ್ರಿ ನೂತನ ದೋಶೆಟ್ಟಿ ಸಚಿವ ಎಸ್.ಟಿ.ಸೋಮಶೇಖರ, ಉದ್ಘಾಟಿಸಿದರು ಜೊತೆಗೆ ಉಪಸಮಿತಿ ಉಪಾಧ್ಯಕ್ಷರಾದ ರಾಜಮನಿ, ವಿಶೇಷಾಧಿಕಾರಿ ದಾಸೇಗೌಡ,ಮೃಗಾಲಯದ ಅಧ್ಯಕ್ಷರಾದ ಎಮ್. ಶಿವಕುಮಾರ ಇನ್ನಿತರರು ಹಾಜರಿದ್ದರು.**

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ.ಯಲ್ಲಪ್ಪ ಮಾತನಾಡಿ ಕವಿ ನಿಜವಾದ ಶಾಸನಕಾರನಾಗಿದ್ದು, ಸೂಕ್ಷ್ಮ ಸಂವೇದನೆಯನ್ನು ಹೊಂದಿರುತ್ತಾನೆ. ಕವಿಗೆ ಮಾತ್ರ ತಾಯಿ ಹೃದಯ ಇರುತ್ತದೆ. ಹೀಗಾಗಿ ಪ್ರತಿಯೊಂದು ಮನೆಯಲ್ಲಿ ಕವಿ ಹುಟ್ಟಬೇಕಿದೆ. ಈ ಮೂಲಕ ಕನ್ನಡ ನಾಡು, ಪರಂಪರೆಯ ಮತ್ತುಷ್ಟು ಬೆಳೆಯಬೇಕಿದೆ ಎಂದು ಆಶಿಸಿದರು. ರಾಜ್ಯದ ನಾನಾ ಭಾಗಗಳಿಂದಬಂದಿದ್ದ ಆಯ್ದ 40 ಕವಿಗಳು ತಮ್ಮ ಕವಿತೆ ವಾಚಿಸಿದರು.

ಕಾರ್ಯಕ್ರಮದಲ್ಲಿ ಕವಿಗೋಷ್ಠಿ ಉಪಸಮಿತಿ–ಉಪಾಧ್ಯಕ್ಷರಾದ ರಾಜಮನಿ,ವಿಶೇಷಾಧಿಕಾರಿ ದಾಸೇಗೌಡ,ಮೃಗಾಲಯದ ಅಧ್ಯಕ್ಷರಾದ–ಎಮ್ ಶಿವಕುಮಾರ ಎಸ್.ಟಿ ಸೋಮಶೇಖರ ,ಶ್ರೀವತ್ಸವ ಹಾಗೂ ಇನ್ನಿತರರು ಉಪಸ್ಥಿತರಿದ್ದರ.

**–ದೇವರಾಜ ವನಗೇರಿ**

## ಸಮಾಜಮುಖಿ ಕವಿತೆಯ ತುರ್ತು ಇದೆ

**ಮೈಸುರು;**ಜಾತಿ ಮತ ಮೇಲುಕೀಳೆಂಬ ರೋಗಗ್ರಸ್ತ ಸಮಾಜದ ಪಿಡುಗನ್ನು ಹೋಗಲಾಡಿಸಿ, ಸಮಾಜದ ಶುದ್ಧೀಕರಣಕ್ಕೆ ಅಗತ್ಯವಿರುವ ಕವಿತೆಗಳನ್ನು ಬರೆಯಬೇಕು ಎಂದು ಹಿರಿಯ ಕವಿ ಡಾ. ದೊಡ್ಡ ರಂಗೇಗೌಡ ಕರೆ ನೀಡಿದರು.



ನಾಳೆ ಹಬ್ಬ ದಸರಾ ಮಹೋತ್ಸವದ ಅಂಗವಾಗಿ ನಗರದ ಕಲಾ ಮಂದಿರದಲ್ಲಿ ಆಯೋಜಿಸಿದ್ದ ದಸರಾ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕವಿತೆಯನ್ನು ದೇವರು ಡಿಂಡರು, ಪ್ರಕೃತಿ, ಪ್ರೀತಿ ಹೀಗೆಲ್ಲಾ ಬರೆದಿದ್ದೇವೆ ಆದ–ರೆ ಪ್ರಕೃತಿಯ ವಿಕೃತಿಗೆ ಕಾರಣನಾದ ಮನುಷ್ಯನ ಕುರಿತು ಕವಿತೆ ಬರೆಯಬೇಕು ಧರ್ಮದ ಹೆಸರಿನಲ್ಲಿ ಜಾತಿ ಹೆಸರಿನಲ್ಲಿ ನಡೆಯುವ ಶೋಷಣೆ ಇದೆ, ಅಂತಹ ಭೂತ ಬಿಡಿಸುವ ಕವಿತೆಗಳನ್ನು ಬರೆಯಬೇಕು ಸಮಾಜಮುಖಿ ಕವಿತೆಯ ತುರ್ತು ಇದೆ. ಅವುಗಳ ಮೂಲಕ ಸಮಾಜದ ಶುದ್ಧೀಕರಣ ಆಗಬೇಕಾಗಿದೆ ಎಂದರು.

ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡರು ಮಾತನಾಡಿ ಈಗ 35 ವರ್ಷಗಳ ಹಿಂದೆ ನಡೆದ ಮೊದಲ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ರಾಷ್ಟ್ರಕವಿ ಕುವೆಂಪುವಹಿಸಿದ್ದರು. ಆ ಕವಿಗೋಷ್ಠಿಯಲ್ಲಿ ಇಂದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಪ್ರೊ.ದೊಡ್ಡರಂಗೇಗೌಡರು ಮತ್ತು ಬಿ ಆರ್ ಲಕ್ಷ್ಮಣರಾಯರು ಕವನ ವಾಚಿಸಿದ್ದಾಗಿ ಸ್ಮರಿಸಿದ್ದರು.

ಜಗತ್ತಿನ ಅತ್ಯಂತ ಸುಂದರ ನಗರಗಳಲ್ಲಿ ಮೈಸೂರು ಕೂಡ ಒಂದು ನಾವು ದಾವಣಗೆರೆ ಎಂದರೆ ಬೆಣ್ಣೆ ದೋಸೆ, ಧಾರಾವಾಡ ಎಂದರೆ ಪೇಡ, ಬೆಳಗಾವಿ ಕುಂದ, ಹೀಗೆ ಏನೇನೋ ಹೇಳುತ್ತೇವೆ ಆದರೆ ಮೈಸೂರಿನ ಜೊತೆಗೆ ಹದಿನೆಂಟು ವಿಷಯಗಳು ಅಂಟಿಕೊಂಡಿವೆ. ಅಷ್ಟು ಅದ್ಭುತವಾಗಿ ಈ ನಗರವನ್ನು ನಿರ್ಮಿಸಿದ್ದಾರೆ. ಇಲ್ಲಿನ ಕುಸ್ತಿಕಲೆ ಮೈಸೂರು ಮಲ್ಲಿಗೆ, ಮೈಸೂರು ಪಾಕ್ ,ಮೈಸೂರು ವೀಳ್ಯದೆಲೆ, ಮೈಸೂರು ಚಿತ್ರಕಲೆ, ಸಂಗೀತ, ನೃತ್ಯ ಈ ಅನೇಕ ವಿಷಯಗಳಿವೆ ಎಂದರು.

**–ಅರ್ಪಿತಾ.ಎನ್.ಎನ್**

# ದಸರಾ ಚಲನಚಿತ್ರೋತ್ಸವ



## “ಅಪ್ಪು ಅಂದು ಇಂದು ಎಂದೆಂದಿಗೂ ಜೀವಂತ”

**ಮೈಸೂರು;**ನಾಡಹಬ್ಬ ದಸರಾದ ಪ್ರಯುಕ್ತ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಮೈಸೂರು ದಸರಾ ಚಲನಚಿತ್ರೋತ್ಸವ ಉಪಸಮಿತಿಯು 2022ನೇ ಸಾಲಿನ ದಸರಾ ಚಲನಚಿತ್ರೋತ್ಸವವನ್ನು ಹಮ್ಮಿಕೊಂಡಿದ್ದು, ಮೂರು ದಿನಗಳ ಕಾಲ ಚಿತ್ರರಂಗದ ಯಶಸ್ವಿ ನಿರ್ದೇಶಕರುಗಳಿಂದ ಮೈಸೂರು ವಿಶ್ವ ವಿದ್ಯಾಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕುರಿತು ಕಾರ್ಯಾಗಾರವು ನಡೆಯಿತು.

ನಂತರ ಮೈಸೂರಿನ ಕಲಾಮಂದಿರದಲ್ಲಿ ಚಲನಚಿತ್ರೋತ್ಸವದ ಉದ್ಘಾಟನೆಯನ್ನು ನೆರವೇ-ರಿಸಲಾಯಿತು.ಮತ್ತು ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 3 ರವರೆಗೆ ಮೈಸೂರಿನಲ್ಲಿನ ಐನಾಕ್ಸ್ ಹಾಗು ಡಿ.ಆರ್.ಸಿ ಚಿತ್ರಮಂದಿರಗಳಲ್ಲಿ ಈ ಉತ್ಸವದ ಅಂಗವಾಗಿ 56 ಕನ್ನಡ ,28 ಪನೋರಮ, 28 ಅಂತರಾಷ್ಟ್ರೀಯ ಪ್ರಶಸ್ತಿ ವಿಜೇತ ಚಲನಚಿತ್ರಗಳು ಸೇರಿದಂತೆ ಒಟ್ಟು 112 ಚಲನ ಚಿತ್ರಗಳನ್ನು ಪರದೆಯ ಮೇಲೆ ಪ್ರದರ್ಶಿಸಲಾಯಿತು.

ಚಲನಚಿತ್ರೋತ್ಸವದ ಮೊದಲನೆಯ ದಿನದಂದು ಐನಾಕ್ಸ್ ಚಿತ್ರಮಂದಿರದಲ್ಲಿ ಬೆಳಗ್ಗೆ 10:30 ರಿಂದ ರಾತ್ರಿ 7:30ರ ವರೆಗೆ ಹಿಂದಿ ಭಾಷೆಯ ಐಸೇಹೀ ಚಿತ್ರ, ಕನ್ನಡ ಭಾಷೆಯ ದೊಡ್ಡಹಟ್ಟಿ ಬೋರೇಗೌಡ ಹಾಗೂ ಈ ಮಣ್ಣು, ಜಪಾನ್ ಭಾಷೆಯ ವೈಫ್ ಆಫ್ ಏ ಸ್ಪೈ ಸೇ-ರಿದಂತೆ ಹಲವಾರು ಭಾಷೆಯನ್ನೊಳಗೊಂಡ ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಕನ್ನಡ ಭಾಷೆಯ ದೊಡ್ಡಹಟ್ಟಿ ಬೋರೇಗೌಡ ಚಿತ್ರದ ಪಾತ್ರಧಾರಿಯಾದ ಸುಧೀರ್ ರವರು ಚಲನಚಿತ್ರದ ವೀಕ್ಷಣೆಗೆ ಆಗಮಿಸಿ, ಬಳಿಕ ಮಾತನಾಡಿ ಒಬ್ಬ ನಟ ಹಾಗೂ ಪ್ರೇಕ್ಷಕನಾಗಿ ಚಿತ್ರವನ್ನು ವೀಕ್ಷಿಸಿದ್ದು ನಿಜಕ್ಕೂ ಸಂತಸದ ವಿಷಯವಾಗಿದ್ದು, ಮೊದಲ ಬಾರಿ ಚಿತ್ರದಲ್ಲಿ ನಟನೆ ಮಾಡಿರುವುದಷ್ಟೇ ಅಲ್ಲದೆ ಈ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಲಭಿಸಿರುವುದು ಹೆಮ್ಮೆಯ ವಿಚಾರ ಎಂದರು.

ರಾಷ್ಟ್ರಪ್ರಶಸ್ತಿ ಪಡೆದ ಹಾಗೂ ಸಮಾಜ-ಕ್ಕೆ ಉತ್ತಮ ಸಂದೇಶವನ್ನು ಸಾರುವಂತಹ ಚಿತ್ರಗಳನ್ನು ಚಲನಚಿತ್ರೋತ್ಸವಕ್ಕೆ ಆಯ್ಕೆ ಮಾಡಿರುವುದು ಒಳ್ಳೆಯ ಸಂಗತಿ.ಚಿತ್ರೋತ್ಸವಕ್ಕೆ



ಸಚಿವ ಸೋಮಶೇಖರ ಉದ್ಘಾಟಿಸಿದರು ಸಮಾರಂಭದಲ್ಲಿ ಶಾಸಕ ನಾಗೇಂದ್ರ ಜಿಲ್ಲಾ ಧಿಕಾರಿ ಬಗಾದಿ ಗೌತಮ್ ಖ್ಯಾತ ನಟಿಯರಾದ ಅನುಪ್ರಭಾಕರ ಕಾವ್ಯ ಶೆಟ್ಟಿ ಅಮೃತಾ ಅಯ್ಯಂಗಾರ ನಿರ್ದೇಶಕ ಪ್ರವೀಣ ಕೃಪಾಕರ ಹಾಗೂ ಇನಿತರರು ಉಪಸ್ಥಿತರಿದ್ದರು

ಚಲನಚಿತ್ರದ ನಿರ್ದೇಶಕರು,ನಿರ್ಮಾಪಕರು ಹಾಗೂ ಆಯಾ ತಂಡದ ಕಲಾವಿದರು ಚಿತ್ರ ವೀಕ್ಷಿಸಲು ಆಗಮಿಸುವುದನ್ನು ನೋಡುವುದೇ ಚಲನಚಿತ್ರದ ವಿಶೇಷತೆ.

### ಅಪ್ಪು ಚಲನಚಿತ್ರೋತ್ಸವ

ಮೈಸೂರು ದಸರಾ ಚಲನಚಿತ್ರೋತ್ಸವದ ಎರಡನೆಯ ದಿನದಂದು ಅಪ್ಪುವಿನ ಸ್ಮರಣೆಗಾಗಿ ಕರ್ನಾಟಕ ರತ್ನ ಡಾ. ಪುನೀತ್ ರಾಜ-ಕುಮಾರ್ ಅವರ ಚಿತ್ರಗಳನ್ನು ಚಿತ್ರಮಂದಿರದಲ್ಲಿ ಪ್ರದರ್ಶಿಸಲಾಯಿತು. ಅಶ್ವಿನಿ ಪುನೀತ್ ರಾಜ-ಕುಮಾರ್ ಅವರು ಪುನೀತ್ ರಾಜ್ ಕುಮಾರ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿದ್ದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಟಿ ಸೋಮಶೇಖರ್ ಹಾಗೂ ಮತ್ತಿತರ ಅತಿಥಿ ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.ನಂತರ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಅಪ್ಪು ಅಭಿನಯಿಸಿದ ರಾಜಕುಮಾರ ಚಿತ್ರದ ಮೊದಲ ದೃಶ್ಯಗಳನ್ನು ವೀಕ್ಷಿಸಿದರು.

ಕರ್ನಾಟಕ ಕಂಡ ಮೇರು ನಟ ಡಾ. ಪುನೀತ್ ರಾಜಕುಮಾರ್ ರವರ ಸಾಧನೆ ಬೆಟ್ಟದಷ್ಟಿದ್ದರೂ, ಸರಳ ವ್ಯಕ್ತಿತ್ವದೊಂದಿಗೆ ಕೋಟ್ಯಾಂತರ ಅಬಿಮಾನಿಯನ್ನು ಗಳಿಸಿದ ಕೀರ್ತಿ ಇವರದ್ದು.ಇಂತಹ ವಯಸ್ಸಿನಲ್ಲಿ ನಮ್ಮನ್ನೆಲ್ಲ ಆಗಲಿ ಹೋದರು ಅವರ ನೆನಪುಗಳು ಮಾತ್ರ ಮಾಸಿ ಹೋಗಲು ಸಾಧ್ಯವಿಲ್ಲ. ಆ ನಿಟ್ಟಿನಲ್ಲಿ ಚಲನಚಿತ್ರ ಉಪಸಮಿತಿಯು 2022ರ ಮೈಸೂರು ದಸರಾ ಚಲನಚಿತ್ರದ ಚಿತ್ರೋತ್ಸವದಲ್ಲಿ ಅಪ್ಪುವಿಗಾಗಿ ಒಂದು ದಿನವನ್ನು ಮೀಸಲಿಟ್ಟು, ಅಪ್ಪು ಬಾಲ ನಟನಾಗಿ ಅಭಿನಯಿಸಿದ ಬೆಟ್ಟದ ಹೂವು ಚಿತ್ರವನ್ನು ಪ್ರದರ್ಶಿಸಿದರು.

ಸಮಾಜಕ್ಕೆ ಒಳ್ಳೆಯ ಸಂದೇಶ ಸಾರಿದ ರಾಜ-ಕುಮಾರ,ರಣವಿಕ್ರಮ, ಯುವರತ್ನ ಚಿತ್ರಗಳನ್ನು ತೋರಿಸಲಾಯಿತು. ನಟ ಪುನೀತ್ ಅಭಿಮಾನಿಗಳ ಜನಸಾಗರವೇ ಸೇರಿದ್ದು ಅಪ್ಪು ನೆನಪಿನ ಸ್ಮರಣೆ ಎಲ್ಲೆಲ್ಲಿಯೂ ಹರಿದಾಡಿತು. ಹೀಗೆ ಏಳು ದಿನಗಳ ಕಾಲ ಚಲನಚಿತ್ರೋತ್ಸವವು ಬಹಳ ಯಶಸ್ವಿಯಾಗಿ ನೆರವೇರಿದ್ದು, ಸಿನಿಮಾ ಪ್ರಿಯರಿಗೆ ಸಂತಸವನ್ನು ನೀಡಿದೆ ಎಂಬುದು ವೀಕ್ಷಕರ ಅಭಿಪ್ರಾಯವಾಗಿದೆ.

-ದಿವ್ಯಶ್ರೀ ಹೆಚ್.ಎಂ

### ದಸರಾಚಲನಚಿತ್ರೋತ್ಸವದ ಛಾಯಾಚಿತ್ರಗಳು



ಪೋಟೊ ಕೃಪೆ -ಹೃತಿನ ಶೆಟ್ಟಿ



ಪೋಟೊ ಕೃಪೆ -ಹೃತಿನ ಶೆಟ್ಟಿ

## ಪ್ರತಿಭೆ ಸೃಜನಶೀಲತೆ ಎನ್ನುವುದು ವ್ಯಕ್ತಿಗತವಾದದ್ದು:ನಾಗತಿಹಳ್ಳಿ ಚಂದ್ರಶೇಖರ

**ಮೈಸೂರು** ಪ್ರತಿಭೆ ಸೃಜನಶೀಲತೆ ಎನ್ನುವುದು ವ್ಯಕ್ತಿಗತವಾದದ್ದು ಅದು ಯಾರೋ ಹೇಳಿಕೊಟ್ಟರೆ ಬರುವಂಥದ್ದಲ್ಲ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹೇಳಿದರು.

ನಾಡಹಬ್ಬ ದಸರಾ ಮಹೋತ್ಸವದ ಪ್ರಯುಕ್ತ ಮೈಸೂರು ದಸರಾ ಚಲನಚಿತ್ರೋತ್ಸವ ಉಪಸಮಿತಿ ಹಮ್ಮಿಕೊಂಡಿರುವ ಚಲನಚಿತ್ರ ಪೂರ್ವ ನಿರ್ಮಾಣ ತಯಾರಿ ಕಾರ್ಯಗಾರದ ಮೊದಲ ದಿನ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ರವರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು.

ಪ್ರತಿಭೆಯ ಎನ್ನುವುದು ಸೃಜನಶೀಲ ಕಾರ್ಯದಿಂದ ಹೊರಹೊಮ್ಮುತ್ತದೆ. ಒಬ್ಬ ನಿರ್ದೇಶಕನ ಚಲನಚಿತ್ರವನ್ನು ನೋಡಿದಾಗ ಅವನ ಪ್ರತಿಭೆ ಏನು ಎನ್ನುವುದು ನಮಗೆ ತಿಳಿಯುತ್ತದೆ. ಹಾಗಾದರೆ ಇಂತಹ ಕಾರ್ಯಗಾರಗಳ ಮುಖ್ಯ ಉದ್ದೇಶವಾದರೂ ಏನು ಎಂಬುದು ನಮಗೆ ಮೂಡುವ ಮೊದಲ ಪ್ರಶ್ನೆ ಆಗಿರುತ್ತದೆ. ಪ್ರತಿಭಾವಂತರಾದ, ಮತ್ತು



ನಿಮ್ಮಂತಹ ಸಿನಿಮಾಸಕ್ತರನ್ನ ಸುಸ್ಥಿರವಾಗಿ ಮೂರ್ತಿಯನ್ನಾಗಿಸುವುದು ಅವರಿಗೆ ಒಂದು ದಿಕ್ಕನ್ನ ತೋರಿಸುವುದು

ಬೇರೆ ಬೇರೆ ರೀತಿಯಲ್ಲಿ ನಿಮಗೆ ಚಿಂತನೆಗೆ ಹಚ್ಚುವುದು, ಇನ್ನೊಂದು ವಿಧವಾದ ದೃಷ್ಟಿಯಲ್ಲಿ ನೋಡಬಹುದು ಎಂದು ಹೇಳಬಹುದಾದಂತ, ಮುಖ್ಯವಾದ ಘಟ್ಟವೆ ಈ ಕಾರ್ಯಗಾರ.ಇದಾದ ಮೇಲೆ ಒಂದು ಚಲನಚಿತ್ರವನ್ನು ಪ್ರಾರಂಭದಿಂದ ಅದನ್ನು ಅನುಷ್ಠಾನಗೊಳಿಸುವುದು ಹೇಗೆ, ಯಾವ ದಿಕ್ಕಿನಲ್ಲಿ ಹೋಗಬೇಕು, ಉದ್ಯಮದ ಸವಾಲುಗಳೇನು, ಎಂಬ ಅನೇಕ ಪ್ರಶ್ನೆಗಳು ಗಳಿಂದ ಈ ಅಲ್ಪಾವಧಿಯ ಕಾರ್ಯಗಾರವನ್ನು ಸಾಂಕೇತಿಕವಾಗಿ ತಿಳಿದುಕೊಳ್ಳಬೇಕು.

ಆದರೆ ಇಷ್ಟಕ್ಕೆ ತೃಪ್ತರಾಗದೆ ನಮ್ಮದೇ ರೂಪದಲ್ಲಿ ಚಲನಚಿತ್ರ ವೀಕ್ಷಿಸುವುದು, ಮತ್ತು ಚಲನಚಿತ್ರಗಳ ನಿರ್ಮಾಣದ ಸೂಚನೆಗಳ ಬಗ್ಗೆ ಅರ್ಥೈಸಿಕೊಳ್ಳುವುದು, ಇವುಗಳೆಲ್ಲವನ್ನ ಗ್ರಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಖ್ಯಾತ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಉಪ ವಿಶೇಷ ಅಧಿಕಾರಿಗಳು ದಸರಾ ಚಲನಚಿತ್ರೋತ್ಸವದ ಉಪವಿಶೇಷಾಧಿಕಾರಿ ಸಮಿತಿ ಆರ್ ಶೇಷ, ದಸರಾ ಚಲನಚಿತ್ರೋತ್ಸವ ಉಪ ಸಮಿತಿಯ ಕಾರ್ಯದರ್ಶಿಗಳಾದ ಹರೀಶ್ ಟಿ ಕೆ. ಮತಿತ್ತರರು ಉಪಸ್ಥಿತರಿದ್ದರು.

ದಿವ್ಯಾ. ಎಸ್

## ಚಲನಚಿತ್ರದ ಪ್ರಾಣ ನಿಮ್ಮ ಬರಹದಲ್ಲಿದೆ

**ಮೈಸೂರು;**ಒಂದು ಚಲನಚಿತ್ರ ನಿರ್ಮಾನವಾಗಬೇಕಾದರೆ ಆ ಚಿತ್ರದ ಹೊಣೆ ಮತ್ತು ಪ್ರಾಣ ನಿರ್ದೇಶಕನ ಬರವಣಿಗೆಯಲ್ಲಿದೆ ಎಂದು ಪ್ರಗತಿಪರ ಚಿಂತಕ ಖ್ಯಾತ ನಿರ್ದೇಶಕ ಎಸ್. ಎಸ್ ಶಂಕರ್ ಹೇಳಿದರು. ನಾಡ ಹಬ್ಬದ ದಸರಾ ಮಹೋತ್ಸವದ ಪ್ರಯುಕ್ತ ಮೈಸೂರು ದಸರಾ



ಚಲನಚಿತ್ರೋತ್ಸವ ಉಪಸಮಿತಿ ಆಯೋಜಿಸಿರುವ ಚಲನಚಿತ್ರ ಪೂರ್ವ ನಿರ್ಮಾಣ ತಯಾರಿ ಕಾರ್ಯಗಾರದ ಕೊನೆಯ ದಿನ ನಿರ್ದೇಶಕ ಎಸ್. ಎಸ್ ಶಂಕರ ಉಪನ್ಯಾಸ ನಡೆಸಿ ಕೊಟ್ಟು, ಮಾತನಾಡಿದ ಅವರು ,ಚಲನಚಿತ್ರವೆಂಬುದು ಕೇವಲ ನಟನೆಯಿಂದ ಪ್ರಾರಂಭವಾಗುವುದಿಲ್ಲ, ಸಂಕಲನ, ವಸ್ತ್ರವಿನ್ಯಾಸ , ಛಾಯಾಗ್ರಹಣ, ಚಿತ್ರಣ ಹೀಗೆ ಹಲವಾರು ಅಂಶಗಳನ್ನೊಳಗೊಂಡು ಒಂದು ಚೌಕಟ್ಟಿನಲ್ಲಿ ನಿರ್ಮಾಣವಾಗುತ್ತದೆ ಎಂದರು,ಜೊತೆಗೆ ಇದೆ ದಿನ ಬೆಳಿಗ್ಗೆ ಖ್ಯಾತ ನಿರ್ದೇಶಕರಾದ ಪವನ್ ಕುಮಾರ ಚಿತ್ರಕತೆಯಿಂದ, ಚಿತ್ರೀಕರಣದ ಬಗ್ಗೆ ತಿಳಿಸಿಕೊಟ್ಟು, ಚಲನಚಿತ್ರದ ನಿರ್ಮಾಣದ ಪೂರ್ವ ಹಂತದ ಲ್ಲಿರಬೇಕಾದಂತ ಕೌಶಲ್ಯಗಳ ಬಗ್ಗೆ ವಿವರಿಸಿ, ಕೊನೆಗೆ ಕೊನೆಗೆ ಪ್ರೇಕ್ಷರೊಂದಿಗೆ ಸಂವಾದ ನಡೆಸಿದರು.

-ಹೃತಿನ ಶೆಟ್ಟಿ

# ದಸರಾ ಪುರವಣಿ

## ಸಂಪಾದಕೀಯ

### ಮಾಧ್ಯಮಗಳ ದ್ವೇಷ ಹರಡುವ ಪ್ರವೃತ್ತಿಯನ್ನು ತಾಯಿ ಚಾಮುಂಡಿ ಹತ್ತಿಕ್ಕಲಿ

ನಾಡಿನಾದ್ಯಂತ ಕೆಲವು ಟಿವಿ ಸುದ್ದಿ ವಾಹಿನಿಗಳ ಮೂಲಕ ದ್ವೇಷದ ಮಾತುಗಳನ್ನು ಪ್ರಸಾರ ಮಾಡುತ್ತಿರುವುದರ ಬಗ್ಗೆ ಸುಪ್ರೀ ಕೋರ್ಟ್ ತೀವ್ರ ಕಳವಳ ವ್ಯಕ್ತ ಪಡಿಸಿರುವುದು ಆತಂಕಕಾರಿಯಾಗಿದೆ.

ದೇಶದ ಸಾಮಾಜಿಕ ಹಾಗೂ ರಾಜಕೀಯ ಸಂವಾದಾಗಳ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಈ ಮಾಧ್ಯಮಗಳು ಧರ್ಮ, ಸಮುದಾಯ, ಜಾತಿ ಮತ್ತು ಇತರ ವರ್ಗಗಳ ಆಧಾರದಲ್ಲಿ ಸಮಾಜವನ್ನು ಒಡೆಯುತ್ತಿವೆ, ಇರುವ ಕಂದಕವನ್ನು ಹೆಚ್ಚಿಸುತ್ತಿವೆ.

ಬಿಕಟ್ಟು ಹಾಗೂ ಸಂಘರ್ಷಗಳನ್ನು ಜಾಸ್ತಿ ಮಾಡುತ್ತಿವೆ. "ಟಿವಿ ಸುದ್ದಿ ವಾಹಿನಿಗಳು ದ್ವೇಷದ ಮಾತುಗಳನ್ನು ಹರಡುವ ಪ್ರಧಾನ ಮಾಧ್ಯಮ ಆಗುತ್ತಿವೆ" ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಹೃಷಿಕೇಶ್ ರಾಯ್ ಅವರಿದ್ದ ಪೀಠ ಹೇಳಿದೆ. ಅಲ್ಲದೆ ಇಂತಹದೆಲ್ಲ ನಡೆಯುತ್ತಿದ್ದರೂ ಕೇಂದ್ರ ಸರ್ಕಾರ ಮೌನವಾಗಿರುವುದು ಏಕೆ ಎಂದು ಪ್ರಶ್ನಿಸಿದೆ.

ಕೋರ್ಟಿನ ಚಾಟಿ ಇದೆ ಮೊದಲನೇ ಬಾರಿಯಲ್ಲಾವಾದರೂ ಈ ಬಾರಿ ಹತ್ತಿಕ್ಕುವ ಕ್ರಮಗಳ ಕುರಿತು ಸರ್ಕಾರದ ವಿವರಣೆಯನ್ನು ಕೇಳಿದೆ? ಕೆಲವು ಸುದ್ದಿ ವಾಹಿನಿಗಳ ನಿರೂಪಕರು "ಕೂಗು ಮಾರಿ" ಸಂಸ್ಕೃತಿಯನ್ನು ಅಳವಡಿಸಿಕೊಂಡು ಭಾವನಾತ್ಮಕವಾಗಿ ಪ್ರಚೋದನಾಕಾರಿಯಾಗಿ ಆಡುವ ಮಾತುಗಳು ರೇಜಿಗೆ ಹುಟ್ಟಿಸುವಂತ್ತಿರುತ್ತದೆ. ಹಿತಾಸಕ್ತ ಗುಂಪುಗಳ ನಿಯಂತ್ರಣದಲ್ಲಿರುವ ಮಾಧ್ಯಮಗಳು ಹಿತಾಸಕ್ತಿ ವಾಣಿಜ್ಯಕ ಆಯಾಮ (ಟಿ ಆರ್ ಪಿ) ವಾಗಿರುವುದು ದುರಂತ. "ಭಾವನೆಗಳು ಸರಕಿನಂತೆ ಬಿಕರಿಯಾಗುತ್ತಿವೆ, ದ್ವೇಷ ಭಾವನೆ ಲಾಭ ತಂದು ಕೊಡುವ" ವ್ಯವಸ್ಥಿಕ ರೂಪವನ್ನು ಇಂದಿನ ಮಾಧ್ಯಮಗಳು ಹುಟ್ಟು ಹಾಕಿವೆ.

ಈಗಾಗಲೇ ಹಲವು ಕಾನೂನುಗಳು ಇದಕ್ಕೆ ಸಂಬಂಧಪಟ್ಟಂತೆ ಜಾರಿಯಲ್ಲಿದೆ .ಅವನ್ನೇ ಕಾರ್ಯರೂಪಕ್ಕೆ ತಂದರೆ ಸಾಕು. ಇಲ್ಲವೆ ಸರ್ಕಾರ ಹೊಸ ಕಾನೂನ್ನನ್ನು ರೂಪಿಸಿಯಾದರು ಸರಿ ಈ ದ್ವೇಷ ಭಾಷಣಗಳನ್ನು ನಿಯಂತ್ರಿಸುವ ಸದ್ಬುದ್ಧಿಯನ್ನು ಆ ತಾಯಿ ಚಾಮುಂಡಿ ದಯಪಾಲಿಸಲಿ ಎಂದಷ್ಟೆ ಈ ಸಂದರ್ಭದಲ್ಲಿ ಬೇಡಲು ಸಾಧ್ಯ.

**–ಡಾ.ಎನ್. ಮಮತ**

## ಬದುಕು ಬಣ್ಣಗಳ ಸಂತೆ

ಮೈಸೂರು ದಸರಾ ಅಂದ ತಕ್ಷಣ ತಲೆಯಲ್ಲಿ ಬರುವ ಅಂಶಗಳು ವರ್ಣ ರಂಜಿತಾ ದೀಪದಲಂಕಾರ ವಿವಿಧ ಕಲಾಕೃತಿಗಳು ಕಾರ್ಯಕ್ರಮಗಳು ಅದ್ದೂರಿತನ ಇನ್ನೂ ಸಾಕಷ್ಟು ವಿಷಯಗಳು ತಲೆಯಲ್ಲಿ ಬರುತ್ತವೆ.

ಆದರೆ ಇತ್ತೀಚಿನ ದಿನಗಳಲ್ಲಿ ಮನುಷ್ಯ ಅಭಿವೃದ್ಧಿ ಅದ್ದೂರಿ ತನದಿಂದ ಸಾಗುತ್ತಿದ್ದಂತೆ ಬಡತನ ,ಅನಕ್ಷರತೆ, ಹಸಿವು, ಕೂಡ ಹೆಚ್ಚಾಗುತ್ತಾ ಹೋಗುತ್ತಿದೆ. ಕಳೆದ ರಾತ್ರಿ ಸ್ನೇಹಿತನ ಜೊತೆ ಗುಡಿ ಆಹಾರ ಮೇಳ ಕಾರ್ಯಕ್ರಮವನ್ನು ಮುಗಿಸಿಕೊಂಡು ಹಿಂದಿರುಗುವಾಗ ರಸ್ತೆಯ ಬದಿಯಲ್ಲಿ ಒಂದು ಕುಟುಂಬ ಭಿಕ್ಷೆ ಬೇಡಲು ಕುಳಿತಿತ್ತು.

ಎರೆಡು ಹೆಣ್ಣು ಒಂದು ಗಂಡು ಮತ್ತೆ ಇಬ್ಬರು ಮಹಿಳೆಯರ ಕುಟುಂಬ ಅದಾಗಿತ್ತು .ಒಂದು ಹುಡುಗನಿಗೆ ಹನುಮಂತನ ಬಣ್ಣ ಹಾಕಿ ಕೈಗೆ ಒಂದು ತಟ್ಟೆ ಕೊಟ್ಟು ಭಿಕ್ಷೆ ಬೇಡಲು ಕುರಿಸಲಾಗಿತ್ತು. ಇದು ಎಂಥ ದೃಶ್ಯ ಬಣ್ಣ ಹಚ್ಚಿಕೊಂಡು ಸ್ನೇಹಿತರ ಜೊತೆ ಆಟ ಆಡಬೇಕಿದ್ದ ವಯಸ್ಸಿನಲ್ಲಿ ಅದೇ ಬಣ್ಣವನ್ನು ಮೈತುಂಬ ಹಚ್ಚಿಕೊಂಡು ಭಿಕ್ಷೆ ಬೇಡುವ ಪ್ರಮೇಯ ನೋಡಿ ನನ್ನ ಕಣ್ಣಿನ ಹನಿ ಜನಗಿತ್ತು.

ದೇವರು ಎಷ್ಟು ಕ್ರೂರಿ ಎಂದು ತಿಳಿಯಲು ಈ ಮೇಲಿನ ಚಿತ್ರ ನೋಡಿದರೆ ಅರಿಯುವಾಗುತದೆ. ಆ ಹುಡುಗನ ಮುಖದಲ್ಲಿ ನೆಗುವಿಲ್ಲ ಎಲೆಯ ವಯಸ್ಸಿನ ತುಂಟತನವಿಲ್ಲ ಆತನ ತಲೆಯಲ್ಲಿ ಇದ್ದದ್ದು ರಸ್ತೆಯಲ್ಲಿ ಹೋಗುವ ಜನರ ಬಳಿ ದುಡ್ಡು ಎಂದು ಕೇಳಿರುವ ಮಾತು ಬಿಟ್ಟರೆ ಆತನ ಬಳಿ ಇನ್ನೇನು ಇರಲಿಲ್ಲ ದೇವರು ಮಾಡಿದ ಪದ್ಧತಿಯು ಅಥವಾ ಮನುಷ್ಯ ಮಾಡಿದ ಪದ್ಧತಿಯು ತಿಳಿಯುತ್ತಿಲ್ಲ ಆದರೆ ಸಮಾಜದ ಶ್ರೀಮಂತ ಮತ್ತು ಬಡವ ಎಂದು ಹೇಳುವ ತಾರೆತಮ್ಯ ಅಳಿಸಲಾಗದ ಬಣ್ಣವಾಗಿಯೇ ಉಳಿದುಬಿಟ್ಟಿದೆ.

ಭೇಟಿ ನೀಡಿದ ಕಾರ್ಯಕ್ರಮದಲ್ಲಿ ಊಟ ಮಾಡಿಸಲು ಒಬ್ಬಳು ತಾಯಿ



ತನ್ನ ಮಗುವಿಗೆ ನೆರೆದಿದ್ದ ಜನ ಸಮೂಹವನ್ನು ತೋರಿಸಿ ತಿನ್ನು ಕಂದ ಎಂದು ತನ್ನ ಮುದ್ದು ಮಾತುಗಳಿಂದ ಊಟ ಮಾಡಿಸುತ್ತಿದ್ದ ದೃಶ್ಯ ಒಂದು ಕಡೆ. ಅದೇ ವಯಸ್ಸಿನ ಮಗು ರಸ್ತೆಯ ಬದಿಯಲ್ಲಿ ನಿಂತು ಒಂದು ಹೊತ್ತಿನ ಊಟಕ್ಕೆ ಭಿಕ್ಷೆ ಬೇಡುತ್ತಿದ್ದನ್ನು ನೋಡಿ ಮನಸ್ಸಿಗೆ ಬಹಳ ನೋವು ತಂದಿದ್ದು. ಮತ್ತೊಂದು ಮಗು ಬಣ್ಣದ ಬುಲೂನ್ ಹಿಡಿದು ಅದನ್ನು ಹೊಡೆದು ಸಂತಸ ಪಡುತ್ತಿದ್ದ ಒಂದು ಹೆಣ್ಣು ಮಗುವನ್ನು ನಾನು ನೋಡಿದೆ ಅದೇ ವಯಸ್ಸಿನ ಮಗು ರಸ್ತೆ ಬದಿಯಲ್ಲಿ ನಿಂತು ಅದೇ ಬಲೂನ್ಗಳನ್ನು ಜೀವನ ಸಾಗಿಸಲು ಮಾರಾಟ

**ಆದರ್ಶ ಹೆಚ್. ಆರ್**

## ಬದುಕು ಬವಣೆಯಲ್ಲ, ವರದಾನ

ಕೆಲವರ ಬದುಕಿನ ಜೀವನದಲ್ಲಿ ವಿಧಿಯು ಕ್ರೂರಾಟ ಆಡಿದರು ನಮಗೆ ಜೀವನ ಸಿಕ್ಕಿರುವುದೇ ವರದಾನ ಎಂದು ಕೊಂಡವರೇ ಹೆಚ್ಚು.ಪ್ರಪಂಚದಲ್ಲಿ ಇರುವ ಎಷ್ಟು ಮಂದಿ ತನ್ನ ಬದುಕೇ ಬಹಳ ಕಷ್ಟ ಅದು ಭವಣೆಯಾಗಿದೆ ಎಂದು ಕೊಳ್ಳುತ್ತಾರೆ, ಆದರೆ ಇನ್ನ ಕೆಲವರು ಇದು ಭವಣೆಯಲ್ಲ ವರದಾನ ಎಂದುಕೊಂಡು ತಮ್ಮ ಜೀವನದಲ್ಲಿ ಬರುವಂತಹ ನೋವು ನಲಿವು, ಖುಷಿ ದುಃಖ ಏನೇ ಇರಲಿ ಅದು ನಮಗೆ ವರದಾನ ಇದ್ದಂತೆ.

ಯಾವುದೇ ಕೆಲಸ ಇರಲಿ, ಅದರಲ್ಲಿ ಮೇಲಿಲ್ಲ ಕೀಲಿಲ್ಲ ನಮಗೆ ಸಿಕ್ಕಿರುವ ಕೆಲಸ ಒಂದು ರೀತಿ ವರದಾನ. ಬದುಕನ್ನು ನಡೆಸಲು ಹಣ ಬೇಕು. ಅದಕ್ಕಿಂತ ಹೆಚ್ಚಾಗಿ ನಾವು ಜೀವಂತವಾಗಿರಲು ಅನ್ನ ಬಹಳ ಮುಖ್ಯ. ಊಟ ಬೇಕೆಂದರೆ ಹಣ ಬಹಳ ಮುಖ್ಯ. ಈ ಹಣಕ್ಕಾಗಿಯೇ ಎಲ್ಲರ ಪರದಾಟ.ಕೆಲವರಂತೂ ಹಣ ಸಂಪಾದನೆ ಮಾಡುವುದರಲ್ಲಿ ನನಗೂ ಇರಲಿ ನನ್ನ ಮುಂದಿನ ಐದು ಪೀಳಿಗೆ ತನಕ ಇರಲಿ ಎನ್ನುವರ ಮಧ್ಯೆ ಒಂದು ಹೊತ್ತಿನ ಅನ್ನ ಸಿಕ್ಕಿದರೆ ಸಾಕು ಎನ್ನುವವರು ಇದ್ದಾರೆ.

ಅದಕ್ಕಾಗಿ ನಾವು ಯಾವ ಕೆಲಸ ಬೇಕಾದರೂ ಮಾಡುತ್ತೇವೆ. ಒಂದು ಪುಟ್ಟ ಹುಡುಗಿ ಬಲೂನ್ಗಳನ್ನು ಮಾರುತಿದ್ದಾರೆ. ಕೆಲವರು ಈ ಬಲೂನ್ಗಳನ್ನು ಕೊಂಡುಕೊಳ್ಳುವಾಗ ಮಕ್ಕಳನ್ನು ಬಿಟ್ಟು ಮಾರಿಸುವುದು ಇವರ ಸ್ಟ್ರಾಟರ್ಜಿ ಎನ್ನುತ್ತಾರೆ. ಇರಬಹುದೇನೋ ಆದರೆ ಅದಕ್ಕಿಂತ ಹೆಚ್ಚಾಗಿ ಅವರಿಗೆ ಹೊಟ್ಟೆ ತುಂಬಿಸಿಕೊಳ್ಳುವುದು ಮುಖ್ಯ.

ಒಂದು ಬಲು ನನ್ನ ಮಾರಿದರೆ ಅದರಲ್ಲಿ ಅವರಿಗೆ ಸಿಗುವುದು ಒಂದು ಪರ್ಸೆಂಟ್ ಗಿಂತಲೂ ಕಡಿಮೆ. ಮಗುವಿನ ಕೈಯಲ್ಲಿ ನಾವೆಲ್ಲರೂ ಹೇಳುವಂತೆ ಸ್ಮೈಲಿ ಬಲೂನ್ ಇದೆ, ಆದರೆ ನಿಜವಾಗಿಯೂ ಯೋಚಿಸಬೇಕೆಂದರೆ ಆ ಮಗುವಿನ ಜೀವನದಲ್ಲಿ ಆ ಮುಗುಳುನಗೆ ಇದೆಯೇ...ಜೀವನದಲ್ಲಿ ಎಷ್ಟೇ ಕಷ್ಟ ಇದ್ದರೂ ತನ್ನನ್ನು ನಂಬಿದವರನ್ನು ಕೈಬಿಡಬಾರದೆಂದು ರಾತ್ರಿಯಾಗಲೆಂದು ನೋಡದೆ ಕಷ್ಟಪಟ್ಟು ದುಡಿಯೋ ಅವರು



ಇವರು. ಎಷ್ಟು ಸ್ಮೈಲಿ ಬಲೂನ್ ಮಾರಿದರು ಏನು ಸುಖ ಅವರ ಜೀವನದಲ್ಲಿ ಆ ನಗುವೇ ಇಲ್ಲ ಎಂದರೆ. ಆದರೂ ಇವರು ನಮಗೆ ಎಷ್ಟೇ ಕಷ್ಟ ಬಂದರೂ ಒಂದು ಸಣ್ಣ ಪುಟ್ಟ ಖುಷಿಯ ಸಾಕು, ಇವರನ್ನು ನಗಿಸಲು. ದೊಡ್ಡ ದೊಡ್ಡ ಕಾಣಿಕೆಗಳು ಬೇಡ, ಒಂದು ದಿನ ಒಂದು ರೂಪಾಯಿ ಅಥವಾ ಹತ್ತು ರೂಪಾಯಿ ಹೆಚ್ಚಾಗಿ ಸಿಕ್ಕಿದಾಗ ಇವರು ಖುಷಿಪಡುವ ರೀತಿಯನ್ನು ನೋಡಿದರೆ ಎಂತವರ ಕಣ್ಣಲ್ಲಾದರೂ ನೀರು ತುಂಬಿಕೊಳ್ಳುತ್ತದೆ.

ಇವರು ಸಂತೋಷಪಡುವ ರೀತಿ ಸಣ್ಣಪುಟ್ಟದರಲ್ಲೂ ಸಿಗುವ ಸಂತೋಷವನ್ನು ನೋಡಲು ಎರಡು ಕಣ್ಣು ಸಾಲದು. ಒಂದು ಹೆಣ್ಣು ಏನು ಬೇಕಾದರೂ ಮಾಡಬಳ್ಳಲು ಅವಳಿಗೆ ಇಂಥ ಕೆಲಸವನ್ನೇ ಮಾಡಬೇಕು ಅಥವಾ ಮಾಡಬಾರದು ಎನ್ನುವ ಹಾಗೆ ಇಲ್ಲ. ಹೆಣ್ಣು ಮಾಡುವಷ್ಟು ಕೆಲಸ ಬೇರೆ ಯಾರೂ ಮಾಡಲಾರದು, ಒಂದು ಹೆಣ್ಣು ತನ್ನ ಮನೆಯನ್ನು ನಡೆಸಲು ಬೀದಿಗಿಳಿದು ಬಲೂನ್, ಫನ್ನಿ ಮಾಸ್ಕ್ ಏನನ್ನು ಬೇಕಾದರೂ ಮಾಡಬಹುದು.

ಗಂಟೆಗಟ್ಟಲ ಕಾಲ ಒಂದು ಜಾಗದಲ್ಲಿ ನಿಂತು ಯಾರಾದರೂ ಒಂದು ಬಲು ತೆಗೆದುಕೊಳ್ಳುತ್ತಾರಾ ಅದರಿಂದ ಒಂದು ಹತ್ತು ರೂಪಾಯಿ ಅಥವಾ 20 ರೂಪಾಯಿ ಸಿಗುತ್ತದೆ ಎಂಬುವ ಆಸೆಯಲ್ಲಿ ನಿಂತಿ ಕಾಲು ಸೋತಾಗ ಎಲ್ಲಿ ಸ್ಥಳ ಕಾಣದೆ ನಿಂತಿದ ಸ್ಥಳದಲ್ಲಿಯೇ ಕುಸಿದರು ತನ್ನ ಕೆಲಸವನ್ನು ಬಿಡದವಳು ಆ ತಾಯಿ. ನನಗೆಷ್ಟು ಕಷ್ಟವಾದರೂ ಪರವಾಗಿಲ್ಲ ನನ್ನ ಮಕ್ಕಳಿಗೆ, ನನ್ನ ಮನೆಯವರಿಗೆ, ನನ್ನವರಿಗೆ ಯಾವುದೇ ರೀತಿ ಕಷ್ಟ ಬರಬಾರದು ಎಂದು ನೋಡಿಕೊಳ್ಳುವಳು ಆ ತಾಯಿ.

ನಮ್ಮ ಹೆಣ್ಣು ಮಕ್ಕಳಿಗೆ ಒಂದು ಸಲಾಂ. ಹೆಣ್ಣು ಏನು ಬೇಕಾದರೂ ಸಾಧಿಸುವವಳು, ಅವಳನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬದುಕು ಭವಣೆಯಲ್ಲ ಇದು ವರದಾನ ಎಂದು ತೋರಿಸಿದವರು ಆ ತಾಯಂದಿರು. ಬದುಕು ಭವಣೆಯಾದಾಗಲ್ಲ, ಬದುಕು ವರದಾನವಾದಾಗ.

**ಭಾರತಿ. ಪಿ**

## ರಂಗೇರಿದ ದಸರಾ ರಂಗೋತ್ಸವ

**ಮೈಸೂರು;**ಪಾರಂಪರಿಕ ದಸರಾ ಮಹೋತ್ಸವಕ್ಕೆ ರಂಗಾಯಣ ವತಿಯಿಂದ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪಿನಾರ್ಥ 10 ದಿನಗಳ ದಸರಾ ರಂಗೋತ್ಸವಕ್ಕೆ ಚಾಲನೆ ದೊರಕಿತು ಮೈಸೂರು ರಂಗಾಯಣದ ಭೂಮಿ ಗೀತಾದಲ್ಲಿ ದಸರಾ ರಂಗೋತ್ಸವಕ್ಕೆ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು ರಂಗ ಸಮಾಜದ ಸದಸ್ಯರಾದ ಡಾ ಚೀನಾ ನಡೊಳ್ಳಿ ರಂಗಾಯಣ ನಿರ್ದೇಶಕರಾದ ಅಡ್ಡಸಿ ಕಾರ್ಯಪ್ಪ ನೇತೃತ್ವದಲ್ಲಿ ಚಾಲನೆ ದೊರಕಿತು ಈ ಸಂದರ್ಭದಲ್ಲಿ ಅಧ್ಯಕ್ಷ ಸುರೇಶ್ ಬಾಬು ಮಾತನಾಡಿ ಸಾಮಾಜಿಕ ಜಾಲತಾಣಗಳು ಚಲನಚಿತ್ರಗಳ ನಡುವೆ ರಂಗಭೂಮಿ ತನ್ನ ವಿಭಿನ್ನ ಪ್ರಯೋಗಗಳ ಮೂಲಕ ಇನ್ನು ಜೀವಂತವಾಗಿದೆ ಎಂಬುದನ್ನ ಸಾಬೀತುಪಡಿಸುತ್ತಿದ್ದು ಸಮಾಜದ ಕುಂದು ಕೊರತೆಗಳನ್ನು ಬಿಂಬಿಸುವಲ್ಲಿ ರಂಗಭೂಮಿ ಮುಂಚೂಣಿಯಲ್ಲಿದೆ ಕೋಟಿ ಬಜೆಟ್ಟಿನ ಚಲನಚಿತ್ರಗಳು ಎರಡು–ಮೂರು ವಾರಗಳು ಚಿತ್ರಮಂದಿರದಲ್ಲಿ ಪ್ರದರ್ಶನ ಕಾಣುವುದು ಹೆಚ್ಚು ಎಂಬ ಕಾಲಘಟ್ಟದಲ್ಲಿ ರಂಗಭೂಮಿ ಜೀವಂತವಾಗಿದ್ದು ಮತ್ತು ಪ್ರೇಕ್ಷಕರನ್ನ ರಂಜಿಸುತ್ತಿರುವುದು ರಂಗಭೂಮಿಯ ವಿಶೇಷ ಎಂದು ನಾಡ ಹಬ್ಬದಸರ ನಾಡಿಗೆ ಒಂದು ಹಿರಿಮೆ ಮೈಸೂರು ದಸರಾ ಬಂದರೆ ಮದುವಣಗಿತ್ತಿಯಂತೆ ಸಿಂಗಾರಗೊಂಡು ನಿಲ್ಲುತ್ತದೆ ನವರಾತ್ರಿಯ ಕಾರಂತರ ನಾಟಕೋತ್ಸವ ದಸರಾಗಿ ಮತ್ತಷ್ಟು ಪುಷ್ಟಿ ನೀಡುವುದು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಯನ್ನ ಯಾರು ಮರೆಯುವಂತಿಲ್ಲ ಇಂತಹ ಮಹಾನ್ ಪುರುಷ ಹುಟ್ಟಿದ ನಾಡಿನಲ್ಲಿ ಜನಿಸಿದ್ದು ನಮ್ಮೆಲ್ಲರ ಪುಣ್ಯ ಎಂದರು ಕಾರಂತರ ನಾಟಕೋತ್ಸವ ಸೆಪ್ಟೆಂಬರ್ 25 ರಿಂದ ಅಕ್ಟೋಬರ್ 4ರ ವರೆಗೆ 10 ನಾಟಕಗಳು ದಸರಾ ರಂಗೋತ್ಸವದಲ್ಲಿ ಪ್ರದರ್ಶನಗೊಳ್ಳುತ್ತವೆ



ಎಂದು ರಂಗಾಯಣದ ನಿರ್ದೇಶಕ ಅಡ್ಡಾಂಡಶಿ ಕಾರ್ಯಪ್ಪ ತಿಳಿಸಿದರು ಈ ಬಾರಿ ರಂಗಕರ್ಮಿ ಡಾ ನ ರತ್ನ ಅವರಿಗೆ ರಂಗ ಗೌರವ ಪುರಸ್ಕಾರ ನೀಡಲಾಗುತ್ತಿದ್ದು ಜೊತೆಗೆ 10,000 ನಗದು ಬಹುಮಾನವನ್ನು ನೀಡಲಾಗುವುದು ರಂಗೋತ್ಸವದಲ್ಲಿ ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷರಾದ ಸುರೇಶ್ ಬಾಬು ಡಾಕ್ಟರ್ ಸೀನಾ ನಡೊಳ್ಳಿ ಅಡ್ಡಾಂಡಾಸಿಕಾರಿಯಪ್ಪ ಮತ್ತು ನಿರ್ಮಲ ಮಠಪತಿ ಉಪಸ್ಥಿತರಿದ್ದರು.

**–ಮಹಾಶಾಂತೇಶ. ಎಂ. ಸಿ**

# ಯುವ ದಸರಾ

## ಸ್ಯಾಂಡಲ್‌ವುಡ್ ನೈಟ್‌ನಲ್ಲಿ ಸಂಭ್ರಮಿಸಿದ ಜನ ಸಮೂಹ

**ಮೈಸೂರು;** ದಸರಾ ಎಂದಾಕ್ಷಣ ಮೊದಲು ನೆನಪಿಗೆ ಬರುವುದೇ ಯುವ ದಸರಾ. ದಸರಾವನ್ನು ಕಣ್ತುಂಬಿಕೊಳ್ಳಲು ಬಂದಂತಹ ಲಕ್ಷಾಂತರ ಪ್ರೇಕ್ಷಕರನ್ನು ಯುವದಸರಾ ತನ್ನತ್ತ ಸೆಳೆದು ಅಲ್ಲಿನ ಸಂಭ್ರಮದಲ್ಲಿ ಮುಳುಗುವಂತೆ ಮಾಡುತ್ತಿದೆ.

ಸೆಪ್ಟೆಂಬರ್ 28ರಂದು ಅಪ್ಪು ನಮನ ಕಾರ್ಯಕ್ರಮದಿಂದ ಶುರುವಾದಂತಹ ಯುವದಸರಾವು ಅಂದಿನಿಂದ ಹಲವಾರು ವಿಶಿಷ್ಟ ಕಾರ್ಯಕ್ರಮಗಳಿಂದ ಪ್ರೇಕ್ಷಕರನ್ನು ರಂಜಿಸುತ್ತ ಬಂದು ಯುವ ದಸರಾದ ಮೂರನೇ ದಿನವಾದ ಸೆಪ್ಟೆಂಬರ್ 30 ನೇ ತಾರೀಕಿನಂದು ಸ್ಯಾಂಡಲ್ ವುಡ್ ಗಾಗಿಯೇ ಮೀಸಲಿಟ್ಟಿದ್ದು, ಹಲವಾರು ಖ್ಯಾತ ಚಲನಚಿತ್ರ ನಟ-ನಟಿಯರು, ಗಾಯಕರು ಇನ್ನಿತರ ಗಣ್ಯರಿಂದ ತುಂಬಿ ತುಳುಕುತ್ತಿತ್ತು.

ಈ ಕಾರ್ಯಕ್ರಮವನ್ನು ವೀಕ್ಷಿಸಲು ಹಾಗೂ ತಮ್ಮ ನೆಚ್ಚಿನ ನಟ ನಟಿಯರನ್ನು ನೋಡಲು ಸಾವಿರಾರು ಜನಸಮೂಹವೇ ಅಲ್ಲಿ ನೆರೆದಿತ್ತು. ಖ್ಯಾತ ನಟರಾದ ಉಪೇಂದ್ರ, ಅಭಿಷೇಕ್ ಅಂಬರೀಶ್, ಪ್ರಮೋದ್ ಶೆಟ್ಟಿ, ರಿಷಬ್ ಶೆಟ್ಟಿ, ಪ್ರಜ್ವಲ್ ದೇವರಾಜ್, ಚಿಕ್ಕಣ್ಣ, ಧನ್ವೀರ ಗೌಡ, ನಟಿ ಸಪ್ತಮಿ ಗೌಡ, ಇನ್ನಿತರರು ಆಗಮಿಸಿ ತಮ್ಮದೇ ಆದ ಶೈಲಿಯಲ್ಲಿ ಎಲ್ಲಾ ಪ್ರೇಕ್ಷಕರನ್ನು ರಂಜಿಸಿದಾಗ ತನ್ನ ನೆಚ್ಚಿನವರನ್ನು ನೋಡಿ ಖುಷಿಪಟ್ಟ



ಪ್ರೇಕ್ಷಕರ ಆನಂದವನ್ನು ಹೇಳುತ್ತಿರದು. ಅದೇ ಸಮಯದಲ್ಲಿ ಮತ್ತೊಂದು ಕಡೆ ತನ್ನ ನೆಚ್ಚಿನ ನಟ ಬಂದಿಲ್ಲವೆಂದು ಬೇಸರವನ್ನು ವ್ಯಕ್ತಪಡಿಸುತ್ತಾ ಬಂದಂತಹ ಯುವ ನಟನಟಿಗರಿಗೆ ಪ್ರೋತ್ಸಾಹ ನೀಡುತ್ತಿದ್ದಂತಹ ಪ್ರೇಕ್ಷಕರನ್ನು ಸಹ ಕಾಣಬಹುದಾಗಿತ್ತು.

ವೇದಿಕೆಯ ಮೇಲೆ ಪ್ರತಿಯೊಬ್ಬ ನಟರ ನಟಿಯರ ಆಗಮನವಾದಾಗ ಕೇಳಿ ಬರುತ್ತಿದ್ದ ಶಿಳ್ಳೆ ಚಪ್ಪಾಳೆಗಳು ಗಗನವನ್ನು ಮುಟ್ಟುತ್ತಿತ್ತು. ಅಷ್ಟರಮಟ್ಟಿಗೆ ಪ್ರೇಕ್ಷಕರು ಕಾರ್ಯಕ್ರಮವನ್ನು ಸಂಭ್ರಮಿಸುತಿದ್ದರು. ಅಲ್ಲಿ ಬಂದಿತ್ತಂತಹ ಹಲವಾರು ಗಣ್ಯರಿಗೆ ಇದು ಮೊದಲ ದಸರವಾಗಿದ್ದು ಅದರ ಅನುಭವವನ್ನು ಹಂಚಿಕೊಂಡರು. ಕನ್ನಡದ ಹಾಡುಗಳಿಗೆ ಹೆಜ್ಜೆ ಹಾಕುವುದರ ಮೂಲಕ ಎಲ್ಲರ ಮನಸ್ಸನ್ನು ಗೆದ್ದರು. ಒಟ್ಟಿನಲ್ಲಿ ಹಲವಾರು ಮನರಂಜನೆಯ ಮೂಲಕ ತುಂಬಿದಂತಹ ಸ್ಯಾಂಡಲ್ವುಡ್ ನೈಟ್ ಖ್ಯಾತ ಹಾಸ್ಯ ಕಲಾವಿದ ಹಾಗೂ ಸಂಗೀತ ಸಂಯೋಜಕರಾದ ಸಾಧು ಕೋಕಿಲ ರವರ ಸಂಗೀತ ಕಾರ್ಯಕ್ರಮದಲ್ಲಿ ಎಲ್ಲರೂ ಕುಣಿದು ಕುಪ್ಪಳಿಸುವಂತೆ ಮಾಡಿತು. ಎಲ್ಲರೂ ಸಂಭ್ರಮಿಸಿದ ಸಂಭ್ರಮವನ್ನು ಹೇಳತೀರದು.

–ಐಶ್ವರ್ಯ

## ಕನ್ನಿಕಾ ಕಪೂರ್ ಗಾಯನ ಮೋಡಿ

**ಮೈಸುರು;** ಮೈಸೂರು ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ 2ನೇದಿನದ “ಯುವದಸರಾ”ಕ್ಕೆ ಬಾಲಿವುಡ ಹಿನ್ನೆಲೆ ಗಾಯಕಿ ಕನ್ನಿಕಾ ಕಪೂರ ಮೆರುಗು ತಂದರು. ಅವರ ಶೈಲಿಯಲ್ಲಿ ಮೋಡಿ ಮಾಡಿದಂತೆ ಯುವ ಸವಮುಹವು ನೃತ್ಯದಲ್ಲಿ ಮೈಮತಿತ್ತು. ಬಾಲಿವುಡ್ ಚಿತ್ರಗಳ ಹಾಡುಗಳನ್ನು ಹಾಡುವ ಮೂಲಕ ತಾವೂ ಕೂಡ ನೃತ್ಯ ಮಾಡಲು ಮುಂದಾಗಿದ್ದರು.



ಈ ವೇಳೆ ನವದುರ್ಗೆಯರ ದರ್ಶನ ,ಶಿವನ ಆರಾಧನೆಯ ಮೂಲಕ ವಿವಿಧ ಕಲಾ ತಂಡಗಳು ತಮ್ಮ ನೃತ್ಯ ರೂಪಕವನ್ನು ಪ್ರದರ್ಶಿಸಿದವು. ದಕ್ಷಿಣ ಕನ್ನಡದ ಯಕ್ಷ ಗಾನ, ಭರತ, ಲಂಬಾಣಿನೃತ್ಯ, ಪಂಜಾಬಿ ಗಳನೃತ್ಯ, ಸೇರಿದಂತೆ ವಿವಿಧ ರಾಜ್ಯಗಳ ಸಂಸ್ಕೃತಿ ಯನ್ನು ಸಾರುವ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಎತ್ತಿ ಹಿಡಿಯು ನೃತ್ಯಗಳನ್ನು ಪ್ರದರ್ಶಿಸಲಾಯಿತು. ಮೈಸುರು ನೃತ್ಯಗಾರ ಸಂಘದ ಕಲಾವಿದರು 1990 ರಿಂದ ಹಿಡಿದು ಇಲ್ಲಿಯ ವರೆಗೂ ತೆರೆಕಂಡಿರುವ ಕನ್ನಡ, ತೆಲುಗು, ತಮಿಳು, ಹಿಂದಿ ಚಿತ್ರಗೀತೆಗಳಿಗೆ ನೃತ್ಯ ಪ್ರದರ್ಶನ ಮಾಡಿದರು. ಹಾಗೆಪುನೀತ ನಟನೆಯ ರಾಜಕುಮಾರ ಚಿತ್ರದ ಟ್ವಿಂಕಲ್ಟ್ವಿಂಕಲ್ಲಿಟಲ್ಸ್ಟಾ ಸುದೀಪ ಅಭಿನಯದ ವಿಕ್ರಾಂತ ರೋಣ ಸಿನಿಮಾದ ರಾ ರಾ ರಕ್ಕಮ್ಮ ಹಾಗೂ ದರ್ಶನ ಅಭಿನಯ ಹಾಗೆ ಪುನೀತ್ನಟನೆಯ ರಾಜಕುಮಾರ ಚಿತ್ರದ "ಟ್ವಿಂಕ ಲ್ಟ್ವಿಂಕ ಲ್ಲಿಟಲ್ಸ್ಟಾರ್" ಸುದೀಪ ಅಭಿನಯದ ವಿಕ್ರಾಂತ್ರೋಣ ಸಿನಿಮಾದ ರಾ ರಾ ರಕ್ಕಮ್ಮ". ಹಾಗೂದರ್ಶನ ಅಭಿನಯದ ಯಜಮಾನ ಚಿತ್ರದ "ಒಂದು ಮುಂಜಾನೆ" ಹಾಡುಗಳಿಗೆ ನೃತ್ಯ ಪ್ರದರ್ಶಿಸಲಾಯಿತು. ಕಡೆಯಲ್ಲಿ ಮಂಗಳೂರಿನ ಕರಾವಳಿನಾಡಿನಕಲೆ,ಹುಲಿ ಕುಣಿತ ಮತ್ತು ಸಾಹಸ ನೃತ್ಯಗಳು ಯುವ ಪಡೆಯನ್ನು ಹುಬ್ಬೇರಿಸಿ ಕುಣಿಯುವಂತೆ ಮಾಡಿದವು.

ಪ್ರದೀಪ ನಾಯಕ್

## ಸೋನು ನಿಗಮ್ ಮೈ ಮರೆಸಿದ ಸವಿಗಾನ

**ಮೈಸೂರು;** ದಸರಾದ ಬೃಹತ್ ಆಚರಣೆಯಾದ "ಯುವ ದಸರಾ"ದ 4ನೇ ದಿನ ಖ್ಯಾತ ಹಿನ್ನೆಲ ಗಾಯಕ ಸೋನು ನಿಗಮ ಮನೋರಂಜನೆ ರಸದೌತಣ ಉಣಬಡಿಸಿದರು.

ಮೇರೇಪ್ಯಾರೇ ಕನ್ನಡಿಗನೆನ್ನುವ ಮೂಲಕ ಕನ್ನಡಿಗರ ಮನಗೆದ್ದರು. ನಂತರ ಸಂಗೀತದ ಸುರಿಮಳೆ ಸುರುಸಿದರು ಸೋನು ನಿಗಮ್ ಕನ್ನಡ ಹಾಗೂ ಹಿಂದಿ ಹಾಡುಗಳನ್ನು ಹಾಡಿದರು. ಸೋನು ನಿಗಮ್ ಹಾಡಿದ ಪ್ರತಿಯೊಂದು ಹಾಡಿಗೂ ಅಪಾರ ಮೆಚ್ಚುಗೆ ವ್ಯಕ್ತಪಡಿಸಿ ಯುವ ಸಮೂಹ ಪ್ರತಿಯೊಂದು ಹಾಡಿಗೂ ಶಿಳ್ಳೆ ಚಪ್ಪಾಳೆಗಳ ಮೂಲಕ ಪ್ರೋತ್ಸಾಹಿಸಿದರು.



ಖ್ಯಾತ ಗಾಯಕಿ ಡಾ.ಶಮಿತಾ ಮಲ್ನಾಡ ತಮ್ಮ ಗಾಯನ ಹಾಗೂ ನೃತ್ಯದ ಮೂಲಕ ಕಾರ್ಯಕ್ರಮಕ್ಕೆ ರಂಗು ನೀಡಿದರು. ನಂತರ ವೇದಿಕೆಗೆ ಆಗಮಿಸಿದ ಚಿತ್ರನಟ ಧ್ರುವಸರ್ಜಾ ಡೈಲಾಗ್ ಹೇಳುವ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಸಹೋದರ ಚಿರಂಜೀವಿ ಸರ್ಜಾ ಹಾಗೂ ಪುನೀತ ರಾಜ-ಕುಮಾರ ರವರನ್ನು ಸ್ಮರಿಸುವ ಮೂಲಕ ಸ್ಯಾಂಡವುಡ್ ಎಲ್ಲಾ ನಟರ ಎಲ್ಲಾ ಸಿನಿಮಾಗಳನ್ನು ನೋಡಿ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

–ಭೂಮಿಕಾ ಜಿ.ಡಿ.

## ಯುವದಸರಾದಲ್ಲಿ ಗಾಯಕಿ ಮಂಗಲಿ

**ಮೈಸೂರು;**ಯುವ ದಸರಾದ ಐದನೇ ದಿನ ವೇದಿಕೆಗೆ ಆಗಮಿಸಿದ್ದ ಸಿಂಗರ ಮಂಗಲಿ ಹಾಡಿಗೆ ಯುವ ಸಮೂಹವೇ ಮನಸೋತಿತು. ಮೊದಲ ಬಾರಿಗೆ “ಯುವದಸರಾ” ವೇದಿಕೆಗೆ ಆಗಮಿಸಿದ ಮಂಗ್ಲಿಯು ವೇದಿಕೆಯಲ್ಲಿ ಕನ್ನಡ ಹಾಗೂ ತೆಲುಗು ಹಾಡು ಗಳನ್ನುಹಾಡುವ ಮೂಲಕ ಸಂಗೀತದ ಸುಧೆಹರಿಸಿದರು.

ಕನ್ನಡದ ಬಹು ಬೇಡಿಕೆಯ ಹಾಡು ಕಣ್ಣು ಹೊಡಿಯಾಕ ಮೊನ್ನೆಕಲತೀನಿ ನಿನ್ನ ನೋಡಿ ಸುಮ್ಮನ್ನೆಂಗಿರ್ಲಿ” ಹಾಡನ್ನುಹಾಡಿ ಯುವಪಡೆಯನ್ನು ರಂಜಿಸಿದರು.

ಇದೇ ವೇಳೆ ಮೈಸೂರು ನನಗೆ ತುಂಬಾಇಷ್ಟ , ಕನ್ನಡ ನನ್ನಎರಡನೇ ಮನೆ” ಎಂದು ಮೈಸೂರು ಹಾಗೂ ಕನ್ನಡದ ಬಗೆ ಗಿನತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು

ಡಾ.ಪುನೀತ್ ರಾಜ್‌ಕುಮಾರ ರವರ ರಾಜಕುಮಾರ ಚಿತ್ರದ ‘ಬೋಂಬೆ ಹೇಳುತ್ತೈತೆ ಮತ್ತೆ ಹೇಳುತ್ತೈತೆ ನೀನೇ ರಾಜ-ಕುಮಾರ’ ಹಾಡನ್ನು ಹಾಡುವ ಮೂಲಕ ಹೆಚ್ಚು ಗಮನಸೆಳೆದರು. ಇನ್ನುಳಿದಂತೆ ಎಣ್ಣೆಗೂ ಹೆಣ್ಣಿಗೂ ಹಾಗೂ ರಾರಾರಕ್ಕಮ್ಮ. ಹಾಡುಗಳನ್ನೂ ಅನಿರುದ್ಧರೊಟ್ಟಿಗೆಹಾಡಿದರು.

ಹಾಡುಗಳಿಂದಲೇ ಮೈಸೂರಿನ ಜನರನು ಮೋಡಿ ಮಾಡಿದ ಮಂಗ್ಲಿಯೂ ಕುಣಿದು ಕುಪ್ಪಳಿಸಿದರು. ಇದೇ ದಿನ ಬಾಲಿವುಡ ಗಾಯಕ ಅವಿ ತ್ರಿವೇದಿ ಹಿಂದಿ ಹಾಡುಗಳನ್ನು ಹಾಡಿದರು .ಆರ್ಸಿ ಸಿನಿಮಾದ ಹಾಡಿನೊಂದಿಗೆ ಯುವ ದಸರಾದ ವೇದಿಕೆ ಯನ್ನು ಏರಿದ ತ್ರಿವೇದಿ ಹಾಡುಗಳ ಮೂಲಕ ತಮ್ಮ ಹಾಡಿನ ಶೈಲಿಯ ಝುಲಕನ್ನು ನೀಡಿದರು.

ಖ್ಯಾತನಟಿ ಹರ್ಷಿಕಾ ಪೂಣಚ್ಚ ಅವರ ಮಂದಾಳತ್ವದಲ್ಲಿ ಜರುಗಿದ “ಸಾರ್ಸ್ಟ್‌ನೈಟ್” ಕಾರ್ಯಕ್ರಮದಲ್ಲಿ ನೃತ್ಯ , ಹಾಸ್ಯ ಹಾಗೂ ಹಾಡುಗಳು ಪ್ರೇಕ್ಷಕರನ್ನು ರಂಜಿಸಿದವು. ಯುವ ಸಂಭ್ರಮದಲ್ಲಿ ವಿಜೇತ ತಂಡಗಳು ಯುವದಸರಾದಲ್ಲಿಯೂ ನೃತ್ಯಪ್ರದರ್ಶಿಸಿದ್ದು ಅದ್ಭುತವಾಗಿ ಮೂಡಿ ಬಂತು.

---ಭೂಮಿಕಾ ಜಿ.ಡಿ.

### ಯುವದಸರಾದ ಕೊನೆಯದಿನ

ಸುನಿದಿ ,ಚೌಹಾಣ ಹಾಡುಗಾರಿಕೆ ಮಸ್ತ್ಂಪರಿನಲ್ಲಿ ನೃತ್ಯ ಮಾಡುವಂತೆ ಯುವ ಸಮೂಹಕ್ಕೆ ಪ್ರೇರೇಪಿಸುವಂತಿತ್ತು. ಒಂದು ಕ್ಷಣವೂ ನಿಲ್ಲದ ಪ್ರೇಕ್ಷಕರು ಅದು ನೃತ್ಯಗಾರರಾಗಿದ್ದರು.ಕನ್ನಡ ಹಾಗೂ ಹಿಂದಿ ಹಾಡುಗಳು ಹಾಡುತ್ತಿದ್ದ ಸುನಿಧಿ ಚೌಹಾಣ್ “ ಕ್ರೇಜಿ ಕಿಯಾರೇ. ಎಂಬ ಹಾಡನ್ನು ಹಾಡುವ ಮೂಲಕ ಪ್ರೇಕ್ಷಕರಲ್ಲಿ ಕ್ರೇಜಿ ಹೆಚ್ಚಿಸಿದರು.ಆ ದಿನವೂ ಕೂಡ ಅಪ್ಪು ರವರ ರಾಜಕುಮಾರ ಚಿತ್ರದ “ಬೊಂಬೆಹೇಳುತ್ತೈತೆ..ಮತ್ತೆಹೇಳುತ್ತೈತೆ. ನೀನೆರಾಕುಮಾರ” ಎಂಬ ಹಾಡನ್ನು ಹಾಡುವ ಮೂಲಕ ಮತ್ತೊಮ್ಮೆ ಅಪ್ಪು ನೆನದು ಕಾರ್ಯಕ್ರಮಕ್ಕೆತೆರೆಎಳೆಯಲಾಯಿತು.

## ಚಿತ್ರಕಲೆ, ಶಿಲ್ಪಕಲೆ ದೇಶದ ಸಂಸ್ಕೃತಿಯ ಪ್ರತೀಕ : ಸಚಿವ ಸುನೀಲ್ ಕುಮಾರ್

ಚಿತ್ರಕಲೆ ಮತ್ತು ಶಿಲ್ಪಕಲೆ ನಮ್ಮ ಸಂಸ್ಕೃತಿಯ ಭಾಗ ಈ ಶಿಬಿರ ಮತ್ತು ಪ್ರದರ್ಶನ ಮೈಸೂರಿನ ದಸರಕ್ಕೆ ಹೊಸ ವೈವಿಧ್ಯಮಯ ಚಟುವಟಿಕೆಗೆ ನಾಂದಿ ಹಾಡಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್ ಕುಮಾರ್ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಮೈಸೂರು ದಸರಾ ಮಹೋತ್ಸವ 2022ರ ಅಂಗವಾಗಿ ಲಲಿತ ಕಲೆ ಮತ್ತು ಕರಕುಶಲ ಉಪಸಮಿತಿಯ ವತಿಯಿಂದ ದಿನಾಂಕ 26-9-2022 ರಂದು ರಾಜ್ಯಮಟ್ಟದ ಚಿತ್ರಕಲಾ ಮತ್ತು ಶಿಲ್ಪಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತ ಹಲವು ಸಂಸ್ಕೃತಿಗಳ ಬೀಡು ಚಿತ್ರಕಲೆ ಶಿಲ್ಪ ಕಲೆಗಳು ಕೂಡ ನಮ್ಮ ಸಂಸ್ಕೃತಿಯ ಭಾಗ. ಈ ಪರಂಪರೆ ಪೀಳಿಗೆಯಿಂದ ಪೀಳಿಗೆಗೆ ಸಾಗಿದಾಗ ಮಾತ್ರ ಅವು ನಮ್ಮೊಂದಿಗಿರುತ್ತವೆ.

ಭಾರತೀಯ ಸಂಸ್ಕೃತಿಯ ಕಸೂತಿ ಕೆಲಸಗಳು ಹೀಗೆ ಮುಂದುವ ರೆಯಬೇಕು.ನೀವೆಲ್ಲರೂ ಇಷ್ಟೊಂದು ಆಸಕ್ತಿ ವಹಿಸಿ ಬಂದಿರುವುದು



ಸಂತೋಷದ ಸಂಗತಿ. ಎಲ್ಲಾ ಕಲಾಕೃತಿಗಳು ತುಂಬಾ ಅದ್ಭುತವಾಗಿ ಮೂಡಿಬಂದಿವೆ. ಇಂತಹ ಅದ್ಭುತ ಕಾರ್ಯಕ್ಕೆ ಕಾರಣಿಭೂತರಾದ ಎಲ್ಲಾ ಕಲಾವಿದರಿಗೂ ಮತ್ತು ಆಯೋಜಕರಿಗೂ ಧನ್ಯವಾದಗಳು ತಿಳಿಸಿದರು.

ನಂತರ ನಾಡಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಿ, ಹತ್ತು ದಿನಗಳ ಶಿಲ್ಪ ಶಿಬಿರ ಮತ್ತು ಚಿತ್ರಕಲಾ ಶಿಬಿರದಲ್ಲಿ ಭಾಗಿಯಾದ ಕಲಾವಿದರಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಲಲಿತಕಲಾ ಉಪಸಮಿತಿಯ ಅಧ್ಯಕ್ಷರಾದ ಟಿ. ಎನ್. ಶಾಂತ, ಉಪಾಧ್ಯಕ್ಷರಾದ ಚಿದಂಬರ ಎಂ.ಎನ್, ಲೋಕೇಶ್ ನಾಯಕ್, ಸದಸ್ಯರಾದ ವೆಂಕಟೇಶ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾದ ವೀರಣ್ಣ ಅರ್ಕಸಾಲಿ ಹಾಗೂ ಅಕಾಡೆಮಿ ರಿಜಿಸ್ಟಾರ್ ಚಂದ್ರಶೇಖರ್ ಉಪ ಸಮಿತಿಯ ಉಪವಿಶೇಷಾಧಿಕಾರಿಗಳಾದ ವಿಜಯ್ ಕುಮಾರ್ ಜಿ.ಆರ್, ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಸ್ವಾಮಿ, ಕಾರ್ಯದರ್ಶಿಗಳಾದ ರಶ್ಮಿ.ಬಿ ಉಪಸ್ಥಿತರಿದ್ದರು.

–ಶ್ವೇತಾ ಚಿದಂಬರ್

# ಕ್ರೀಡಾ ದಸರಾ



## ಯೋಗ ದಸರಾ;ಯೋಗದಿಂದ ಆರೋಗ್ಯ

**ಮೈಸೂರು:** ಸೆಪ್ಟೆಂಬರ್ 26 ರಂದು ನಾಡ ಹಬ್ಬ ದಸರಾ ಮಹೋತ್ಸವದ ಒಂದು ಭಾಗವಾಗಿ ನಗರದ ಓವೆಲ್ ಮೈದಾನದಲ್ಲಿ ಆಯೋಜಿಸಿದ್ದ ಯೋಗ ದಸರಾ ಮತ್ತು ಯೋಗ ನೃತ್ಯ ರೂಪಕಕ್ಕೆ ಶಾಸಕ ಎಲ್ ನಾಗೇಂದ್ರ ಸೋಮವಾರ ಸಂಜೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಯೋಗ ಎಂಬುದು ಆರೋಗ್ಯ ಮತ್ತು ದೇಹವನ್ನು ಉತ್ತಮವಾಗಿಟ್ಟುಕೊಳ್ಳಲು ಸಹಕಾರಿಯಾಗಿದೆ ಎಂದು ಶಾಸಕ ಎಲ್ ನಾಗೇಂದ್ರ ರವರು ತಿಳಿಸಿದರು. ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹೆಚ್. ಡಿ .ಭಾಸ್ಕರ್ ,ದೇವರಾಜ್, ಎ .ಪ್ರಭು, ಅರ್ಪಣ, ಎಂ .ಎಸ್ ರಮೇಶ್ ,ಕುಮಾರ್, ಗೀತಾ ಕುಮಾರ್ ಅವರಿಗೆ "ಯೋಗಾ ಸಿರಿ"ಪ್ರಶಸ್ತಿ ನೀಡಿ ಅಭಿನಂದಿಸಿ ಮಾತನಾಡಿದರು. 2015ರಲ್ಲಿ ಪ್ರಧಾನ ಮಂತ್ರಿ ಮೋದಿಯವರು ಯೋಗ ದಿನವನ್ನು ವಿಶ್ವಸಂಸ್ಥೆಗೆ ಘೋಷಣೆ ಮಾಡಬೇಕು ಎಂದು ಮನವಿ ಮಾಡಿದಾಗ ಅದಕ್ಕೆ ಅನುಮತಿ ದೊರೆಯಿತು.

ನಂತರ ಮೊದಲನೇ ವರ್ಷವೇ ವಿಶ್ವದ ಬಹುತೇಕ ದೇಶಗಳು ಭಾರತದೊಂದಿಗೆ ಯೋಗಕ್ಕೆ ಬೆಂಬಲ ನೀಡಿ ವಿಶ್ವ ಯೋಗ ದಿನವನ್ನು ಯಶಸ್ವಿಗೊಳಿಸಿದರು.

ಅರಮನೆ ಆವರಣಕ್ಕೆ ಪ್ರಧಾನಿಯವರು ಆಗಮಿಸಿ, 15,000 ಯೋಗ ಪಟುಗಳೊಂದಿಗೆ ಯೋಗ ಪ್ರದರ್ಶನವನ್ನು ಮೈಸೂರಿನಲ್ಲಿ ನೆರವೇರಿಸಿದರು. ಇದೇ ಸಲುವಾಗಿ ಮೈಸೂರು ವಿಶ್ವಕ್ಕೆ ತಲುಪಿತು. ಮೈಸೂರಿನಲ್ಲಿ ಕೆ.ಪಟ್ಟಾಭಿ ಜೋಯಿಸ್, ಕೃಷ್ಣಮಾಚಾರ್, ಸುಂದರ್ ರಾಜ ಸೇರಿದಂತೆ ಅನೇಕರು ಯೋಗಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ ಎಂದರು. ಯೋಗ ಮಾಡಲು ವಿಶ್ವದ ಅನೇಕ ಜನರು ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ಯೋಗಭ್ಯಾಸನ್ನು ಮಾಡುತ್ತಿದ್ದಾರೆ .



ಆದರೆ ನಮ್ಮವರೇ ಯೋಗ ಮಾಡಲು ಹಿಂದೇಟು ಹಾಕುತ್ತಿದ್ದಾರೆ ಎಂದರು.

ಯೋಗದಿಂದ ದೈಹಿಕ ಮತ್ತು ಮಾನಸಿಕವಾಗಿ ಉತ್ತಮವಾಗಿ ಇಟ್ಟುಕೊಳ್ಳಬಹುದು ಇದರಿಂದ ಜೀವನದ ಶೈಲಿಯೂ ಬದಲಾಗುತ್ತದೆ. ಪ್ರತಿಯೊಬ್ಬರು ಯೋಗಭ್ಯಾಸ ಮಾಡಿ ಎಂದು ತಿಳಿಸಿದರು .ಮಂಡ್ಯ ಜಿಲ್ಲೆಯ ನಿಧಿಶ್ರೀ ಮತ್ತು ನಿಖಿತಾ ತಂಡ "ಮಾ ತುಜೆ ಸಲಾಂ" ಗೀತೆಗೆ ಯೋಗ ನೃತ್ಯ ರೂಪಕ ಪ್ರದರ್ಶಿಸಿದರು. ಯೋಗ ದಸರಾ ಕಾರ್ಯಕ್ರಮವು ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 3 ರ ತನಕ ನಡೆದಿದೆ.

ಕಾರ್ಯಕ್ರಮದಲ್ಲಿ ಯೋಗ ದಸರ ಉಪ ಸಮಿತಿ ಅಧ್ಯಕ್ಷ ಬಾಲಕೃಷ್ಣ ,ಉಪಾಧ್ಯಕ್ಷರಾದ ಈಶ್ವರ್, ಜಿ. ಸಿ ಯೋಗೇಶ್ ಕುಮಾರ್, ಕೆ .ವೈ ಮಂಜು ,ಯೋಗ ದಸರ ಉಪಸಮಿತಿ ಹಾಗೂ ಭೂದಾಖಲೆಗಳ ಉಪನಿರ್ದೇಶಕಿ ಆದ ಸೀಮಂತಿನಿ , ಕಾರ್ಯಾಧ್ಯಕ್ಷ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಆದ ಜಿ . ಆರ್ ಮಹೇಶ್ ,ಕಾರ್ಯದರ್ಶಿ

-ತೇಜಾ ಎಸ್

## ನಾಡಕುಸ್ತಿಯನ್ನು ಕಣ್ತುಂಬಿಕೊಳ್ಳುವುದೇ ಒಂದು ಅಧ್ಭುತ

**ಮೈಸೂರು;**ದಸರಾದಲ್ಲಿ ಜಂಬೂ ಸವಾರಿ ನಂತರದ ಪ್ರಮುಖ ಆಕರ್ಷಣೆ ದಸರಾ ಕುಸ್ತಿ ಸ್ಪರ್ಧೆ ಎಂದರೆ ಅತಿಶೋಕ್ತಿಯಾಗಲಾರದು.ಪ್ರತಿವರ್ಷದಂತೆ ಈ ವರ್ಷವೂ ಸಹ ಪ್ರಖ್ಯಾತ ನಾಡ ಕುಸ್ತಿ ಅದ್ದೂರಿಯಾಗಿ ಶುರುವಾಯಿತು. ದಸರಾ ಕುಸ್ತಿ ಪಂದ್ಯಾವಳಿಯು ಪರಂಪರಾನುಗತವಾಗಿ ನಡೆದು ಬಂದಂತಹ ಸಂಪ್ರದಾಯವಾಗಿದ್ದು, ತನ್ನದೇ ಆದ ಮಹತ್ವವನ್ನು ಹೊಂದಿದೆ. ಹಲವು ಕುಸ್ತಿಪಟುಗಳಿಗೆ ಈ ಪಂದ್ಯಾವಳಿಯಲ್ಲಿ ಸೆಣೆಸಾಡಬೇಕೆಂಬುದು ಅವರ ಕನಸಾ ಗಿರುತ್ತದೆ.

ಅದಕ್ಕಾಗಿ ವರ್ಷಪೂರ ಗರಡಿ ಮನೆಯಲ್ಲಿ ಬೆವರು ಸುರಿಸಿ,ಪಗಡುದಸ್ತಾಗಿ ದೇಹವನ್ನು ಹುರಿಗೊಳಿಸಿರುತ್ತಾರೆ. ಬರೀ ರಾಜ್ಯವಲ್ಲದೆ, ದೇಶದ ನಾನಾ ಭಾಗಗಳಿಂದ ಬಂದ ಕುಸ್ತಿಪಟುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಸ್ಪರ್ಧೆಯಲ್ಲಿ ದೊರೆಯುವ 'ದಸರಾ ಕೇಸರಿ' , 'ದಸರಾಶ್ರೀ' ಪ್ರಶಸ್ತಿಗಳನ್ನು ಪಡೆಯುವುದು ಒಂದು ಪ್ರತಿಷ್ಠೆ ಆಗಿರುತ್ತದೆ. ಕೇವಲ ಪುರುಷರಲ್ಲದೆ ಮಹಿಳಾ ಜಟ್ಟಿಗಳು ಸಹ ಕಾದಾಡುವುದು ಈ ಪಂದ್ಯಾವಳಿಯ ವಿಶೇಷ.

ಈ ನಾಡ ಕುಸ್ತಿಯನ್ನು ವೀಕ್ಷಿಸಲು ಸಹಸ್ರಾರು ಕುಸ್ತಿ ಪ್ರಿಯರು ಕಿಕ್ಕಿರಿದು ಸೇರಿರು ತ್ತಾರೆ.ಅಖಾಡದಲ್ಲಿ ಜಟ್ಟಿಗಳು



ಮದಗಜಗಳಂತೆಕಾದಾಡುವಾಗ ನೋಡುಗರ ಮೈಜುಮ್ಮೆನ್ನುತ್ತದೆ. ಪೈಲ್ವಾನನುಗಳಿಸುವ ಪ್ರತಿ ಪಟ್ಟಿಗೂ, ಶಿಳ್ಳೆ ಕೇಕೆ ಗಳು ಮಾರ್ದನಿಸುತ್ತವೆ. ಈ ಮಹೋನ್ನತ ದೇಸಿಕಲೆಯನ್ನು ವೀಕ್ಷಿಸುವಾಗ ಸಿಗುವ ಅದ್ಭುತ ಅನುಭೂತಿ ಯೇಬೇರೆ. ಪ್ರೇಕ್ಷಕನಮನದಲ್ಲಿ ಕುತೂಹಲ ಕೆರಳಿಸುವ ಈ ಪ್ರಖ್ಯಾತ ನಾಡ ಕುಸ್ತಿಯನ್ನು ಕಣ್ತುಂಬಿಕೊಳ್ಳುವುದೇ ಒಂದು ಸುಂದರ ಸೋಜಿಗ.

-ಪವಿತ್ರಾ ಎಂ ಎಸ್

## ದಸರಾ ಕ್ರೀಡಾಕೂಟಕ್ಕೆ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಅವರಿಂದ ಚಾಲನೆ

**ಮೈಸೂರು;**ದಸರಾ ಕ್ರೀಡಾ ಕೂಟಕ್ಕೆ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಅವರಿಂದ ಚಾಲನೆ ನಾಡ ಹಬ್ಬ ಮೈಸೂರು ದಸರಾ ಪ್ರಯುಕ್ತ ದಸರಾ ಕ್ರೀಡಾಕೂಟವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆಯೋಜಿಸಲಾಗಿದೆ.

ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 2 ರ ವರೆಗೆ ನಡೆಯುವ ನಾಲ್ಕು ದಿನಗಳ ಕ್ರೀಡಾಕೂಟದಲ್ಲಿ ರಾಜ್ಯದ ಎಲ್ಲಾ ನಾನ ಭಾಗಗಳಿಂದ ಬರುವ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದಡಾ.ಎನ್ ನಾರಾಯಣಗೌಡ, ಮಾನ್ಯ ಸಹಕಾರ ಹಾಗೂ ಉಸ್ತುವಾರಿ ಸಚಿವರು ಆದ ಶ್ರೀ ಎಸ್ ಟಿ ಸೋಮಶೇಖರ್ ಹಾಗೂ ಅಂತರಾಷ್ಟ್ರೀಯ ಕುಸ್ತಿ ಪಟು ಶ್ರೀಮತಿ ಸಾಕ್ಷಿ ಮಲ್ಲಿಕ್ ಮತ್ತಿತರ ಕ್ರೀಡಾ ವಿಭಾಗದ ಗಣ್ಯರಿಂದ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮದ ಉದ್ಘಾಟನಾ ಭಾಷಣವನ್ನು ಮಾಡಿದ ಡಾ.ಎನ್ ನಾರಾಯಣಗೌಡ ಅವರು ಈ ಬಾರಿ ಕ್ರೀಡಾ ಇಲಾಖೆಯಿಂದ ಹಲವಾರು ಕ್ರೀಡೆಗಳನ್ನುಹಮ್ಮಿಕೊಂಡಿದ್ದು, ಅದಕ್ಕೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿರುವುದಾಗಿ, ಇದಕ್ಕೆ ಸಂಬಂಧಿಸಿದಂತೆ 800ಕ್ಕೂಅಧಿಕ ಸಿಬ್ಬಂದಿ ವರ್ಗವನ್ನುನೇಮಿಸಲಾಗಿದೆ ಎಂದರು.

ಸುಮಾರು 4600ಕ್ಕೂ ಹೆಚ್ಚು



ಕ್ರೀಡಾಪಟುಗಳು ಈ ದಸರಾ ಕ್ರೀಡಾ ಕೂಟದಲ್ಲಿ ಸ್ಪರ್ಧಿಸಲಿದ್ದು, ಇಲ್ಲಿ ವಿಜೇತರಾದ ಸ್ಪರ್ಧಿಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವಾಗಿ ಭಾಗವಹಿಸಬೇಕ ಎಂದು ಪ್ರಾಸ್ತಾವಿಕನುಡಿಗಳನ್ನು ಮುಗಿಸಿದರು.

ನಂತರ ಮಾತನಾಡಿದ ಅಂತರಾಷ್ಟ್ರೀಯ ಕುಸ್ತಿ ವಿಜೇತ ಶ್ರೀಮತಿ ಸಾಕ್ಷಿ ಮಲ್ಲಿಕ್, " ನಾನು 4 ನೇವಯಸ್ಸಿ ನಿಂದಲೇ ಕ್ರೀಡಾಕೂಟಗಳಲ್ಲಿ ಭಾಗವಹಿಸುತ್ತಿದ್ದೆ. ಒಲಂಪಿಕ್ಸ್ ನಲ್ಲಿ ಭಾರತದ ಪರ ಪದಕ ಗೆದ್ದದ್ದು ನನಗೆ ಹೆಮ್ಮೆ ಇದೆ.

ನಮ್ಮ ಶಿಸ್ತು, ಪರಿಶ್ರಮ ಹಾಗೂ ಒಂದು ನಿರ್ದಿಷ್ಟ ಗುರಿ ಇದ್ದರೆ ನಮ್ಮ ಕನಸುಗಳನ್ನು ಈಡೇರಿಸಿಕೊ ಳ್ಳಬಹುದು". ಎಂದು ನೆರೆದಿದ್ದ ಕುಸ್ತಿಪಟುಗಳಿಗೆ ಸ್ಫೂರ್ತಿದಾಯಕ ಮಾತು ಗಳನ್ನಾಡಿ ,ಸಾಂಪ್ರದಾಯಿಕವಾಗಿ ಕ್ರೀಡಾ ದೀವಿಗೆಯನ್ನು ಪ್ರದರ್ಶಿಸುವ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿದರು.

ರಾಜ್ಯಮಟ್ಟದಲ್ಲಿ ನಡೆಯಲಿರುವ ನಾಲ್ಕು ದಿನಗಳ ವಿವಿಧ ಕ್ರೀಡಾಕೂಟದಲ್ಲಿ 27 ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸ ಲಾಗಿದ್ದು, ಅಥ್ಲೆಟಿಕ್ಸ್, ಬಾಲ್ಬಾಡ್ಮಿಂಟನ್, ಬ್ಯಾಸ್ಕೆಟ್ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್ಬಾಲ್, ಆರ್ಚರಿ, ಬ್ಯಾಡ್ಮಿಂಟನ್, ಜಿಮ್ನಾಸ್ಟಿಕ್, ಹ್ಯಾಂಡ್ ಬಾಲ್, ಹಾಕಿ,ಜೂಡೋ,ಕಬಡ್ಡಿ,ಖೋ ಖೋ, ಟೆನ್ನಿಸ್, ನೆಟ್ಬಾಲ್, ಟೇಬಲ್ ಟೆನ್ನಿಸ್, ಟೆಕ್ವಾಂಡೊ, ಥ್ರೋಬಾಲ್,ವಾಲಿಬಾಲ್,ವೇಟ್ ಲಿಫ್ಟಿಂಗ್, ಕುಸ್ತಿ,ಈಜು, ಯೋಗ ಸೇರಿದಂತೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಇದೇ ಮೊದಲ ಬಾರಿಗೆಶೂಟಿಂಗ್ ಹಾಗೂ ಈಜು ಸ್ಪರ್ಧೆ ನಡೆಸಲಾಗುತ್ತಿದೆ.

-ಪವಿತ್ರ ಎಂಎಸ್

## ಹೆಲಿರೈಡ್ ಮೂಲಕ ಸಂಪೂರ್ಣ ಮೈಸೂರು ದರ್ಶನ

**ಮೈಸೂರು;**ದಸರಾ ಹಬ್ಬ ಬಂತೆಂದರೆ ಮೈಸೂರು ಎಲ್ಲರ ಆಕರ್ಷಣೀಯ ಕೇಂದ್ರ ಬಿಂದು ಆಗುತ್ತದೆ. ಕಾರಣ ಇಲ್ಲಿ ಹಲವಾರು ಮನರಂಜನೆ ನೀಡುವ ಕಾರ್ಯಕ್ರಮಗಳು ನಡೆಯುತ್ತದೆ. ಈ ಸಾಲಿಗೆ ಸೇರುವ ಮತ್ತೊಂದು ಅಂಶವೆಂದರೆ ಹೆಲಿ ಕ್ಯಾಪ್ಟರ್ ರೈಡ್. ಕೋವಿಡ್ ಹಿನ್ನೆಲೆ ಯಲ್ಲಿ ಜನರು ಮನೆಯಲ್ಲಿ ಕುಳಿತು ಹಲವಾರು ಮನರಂಜನ ಕಾರ್ಯಕ್ರಮಗಳಿಂದ ವಂಚಿತರಾಗಿದ್ದರು .

ಆದರೆ ಈ ಬಾರಿ ಕೋವಿಡ್ ಗಣನೀಯವಾಗಿ ಇಳಿಕೆಯಾಗಿರುವುದರಿಂದ ಎಲ್ಲಾ ಕಾರ್ಯಕ್ರಮಗಳು ಬಹಳ ಅದ್ದೂರಿಯಾಗಿ ಚಾಲನೆಗೊಂಡಿದ್ದು ಅದರಲ್ಲಿ ಹೆಲಿಕ್ಯಾಪ್ಟರ್ ರೈಡ್ ಕೂಡ ಒಂದು. . ಅದರಲ್ಲೂ ದಸರಾ ಸಮಯದಲ್ಲಿ ರಾತ್ರಿಯ ವೇಳೆ ಮೈಸೂರು ದೀಪಗಳಿಂದ ಕಂಗೊಳಿಸುತ್ತಿರುವ ಸಮಯದಲ್ಲಿ ಹೋದರೆ ನಾವು ಬೇರೆ ಪ್ರಪಂಚಕ್ಕೆ ಹೋದಂತೆ ಭಾಸವಾಗುತ್ತದೆ.

ಈ ಹೆಲಿಕ್ಯಾಪ್ಟರ್ ರೈಡ್ ದಸರಾದ ವಿಶೇಷ ಆಕರ್ಷಣೆಯಾಗಿದ್ದು ಹೊರದೇಶಗಳಿಂದ ಬಂದಂತಹ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ಎಲ್ಲಾ ಪ್ರೇಕ್ಷಕರಿಗೂ ಒಮ್ಮೆಯಾದರು ಹೋಗಬೇಕು ಹಾಗೂ ಒಮ್ಮೆ ಹೋದವರಿಗೆ ಮತ್ತೊಮ್ಮೆ ಮಗದೊಮ್ಮೆ ಹೋಗಬೇಕು ಎಂಬ ಆಸೆಯನ್ನು ಹುಟ್ಟಿಸುತ್ತದೆ.

ಮೈಸೂರಿನ ಜಯಚಾಮರಾ ಒಡೆಯರ್ ಹೆಲಿಪ್ಯಾಡ್ ಬಳಿ ಹೆಲಿಕಾಪ್ಟರ್ ರೈಡ್ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 05 ರ ವರೆಗೆ ನಡೆಯುತ್ತದೆ. ತಲಾ ಒಬ್ಬರಿಗೆ 3,999 ರೂ ಟಿಕೇಟ್ ದರವನ್ನು



ನಿಗಧಿ ಪಡಿಸಲಾಗಿದ್ದು, 2 ವರ್ಷದವರಿಗೆ ಉಚಿತವಾಗಿರುತ್ತದೆ. ಹೆಲಿಕಾಪ್ಟರ್ ರೈಡ್ ಬೆಳಿಗ್ಗೆ 10 ರಿಂದ ಸಂಜೆ 06 ಗಂಟೆಯವರೆಗೆ ನಡೆಯಲಿದ್ದು, ಭಾನುವಾರ ಮಾತ್ರ ಬೆಳಿಗ್ಗೆ 09 ರಿಂದ ಸಂಜೆ 06 ರವರೆಗೆ ನಡೆಯಲಿದ್ದು ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಈಗಾಗಲೇ ಇದರ ಅನುಭವ ಪಡೆದವರು ಖುಷಿಯಿಂದ ಹೊರಬಂದು ಇಂತಹ ಹೆಲಿರೈಡ್ ವರ್ಷಕ್ಕೆ ಎರಡರಿಂದ ಮೂರು ಬಾರಿ ನಡೆಯಬೇಕು ಎಂಬ ಅನಿಸಿಕೆ ಹಂಚಿಕೊಳ್ಳುತ್ತಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಮುಂದಿನ ಬಾರಿಗೆ ಕಾಯದೆ ಈಗಲೇ ಹೋಗಿ ಇದರ ಸುಂದರ ಅನುಭವವನ್ನು ಸವಿಯುವುದು ಉತ್ತಮ.

-ಐಶ್ವರ್ಯಾ



# ದಸರಾ ಚಿತ್ರಣ



ರೋಹಿಣಿ ಎಮ್.ಸಿ



ದಿವ್ಯಶ್ರೀ ಎಚ್.ಎಮ್



ಆದರ್ಶ್ ಎಚ್.ಆರ್



ರಾಕೇಶ್ ಡಿ.ಎಮ್



ಭೀಮಸಿ.ಎಮ್.ಕೆ



ಪುಷ್ಪಲತಾ



-ಪವಿತ್ರ ಎಂ ಎಸ್



ತೇಜಾ ಎಸ್




ದೇವರಾಜ ವನಗೇರಿ



ಹೃತಿನ್ ಎಚ್.ಪಿ



ದಿವ್ಯಾ ಎಸ್



ಮಹಾಶಾಂತೇಶ್ ಎಮ್.ಸಿ



ಅನುಶ್ರೀ



ಭಾರತಿ ಹುರಗಲ್



ಮನೋಜ್ ಕೆ.ಎಮ್



ಭೂಮಿಕಾ ಬಿ.ಎಸ್



ತ್ರಿಷಾ

# ದಸರಾ ವೈಭವ



## "ಯುವ" ಮನಸ್ಸುಗಳಿಗೆ "ಸಂಭ್ರಮ"



**ಮೈಸೂರು;** ದಸರಾ ಮಹೋತ್ಸವದ ಪ್ರಯುಕ್ತ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಿಂದೇಳುತ್ತಿರುವ ನಗರಿಯನ್ನು ನೋಡುವುದೇ ಕಣ್ಣಿಗೊಂದು ಹಬ್ಬವಾಗಿದೆ. ಈ ಅಭೂತ ಕಾರ್ಯಕ್ರಮಕ್ಕೆ ಅದ್ದೂರಿ ಆರಂಭ ದೊರೆತಿದ್ದು ಯುವ ಸಂಭ್ರಮ ಕಾರ್ಯಕ್ರಮದಿಂದ, ಸೆಪ್ಟೆಂಬರ್ 16 ರಿಂದ 24ರ ವರೆಗೆ 9 ದಿನಗಳ ಕಾಲ ಬಹಳ ವಿಜೃಂಭಣೆಯಿಂದ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ದಿನವೂ ಕಾರ್ಯಕ್ರಮವು ನೆರವೇರಿತು.

ಮೊದಲನೆಯ ದಿನ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಚಲನಚಿತ್ರ ನಟ ಡಾಲಿ ಧನಂಜಯ್ ಅವರು ಆಗಮಿಸಿದ್ದು ,ಚಂಡೆ ಬಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.ಕಾರ್ಯಕ್ರಮವನ್ನು ಉದ್ದೇಶಿಸಿ ಮಾತ ನಾಡಿದ ಅವರು "ನಮ್ಮ ಸುತ್ತಮುತ್ತಲಿನ ಪರಿಸರ ಎಂದು ಹಬ್ಬಗಳಿಂದ ಕೂಡಿರಬೇಕು ವಿನಹ ಅಬ್ಬರಗಳಿಂದಲ್ಲ.

ಜಾತಿ, ಮತ ,ಧರ್ಮ ಗಳನ್ನು ಮೀರಿ ನಿಂತು ಜೀವನವನ್ನು ಸಾರಿ ದೇಶವನ್ನು ಕಟ್ಟಬೇಕು" ಎಂದು ಯುವ ಮನಸುಗಳಿಗೆ ಕಿವಿ ಮಾತನ್ನು ಹೇಳಿದರು.

ಯುವ ದಸರಾ ಸಂಭ್ರಮದ ಪ್ರಾರಂಭೋತ್ಸವಕ್ಕೆ ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್, ಮೈಲ್ಯಾಕ್ ಅಧ್ಯಕ್ಷ ಆರ್. ರಘು, ಉಪ ಮೇಯರ್ ಜಿ.ರೂಪಾ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಹದೇವಯ್ಯ, ಪಾಲಿಕೆ ನಾಮ ನಿರ್ದೇಶಿತ ಸದಸ್ಯ ರಮೇಶ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಯುವ ಸಂಭ್ರಮ ಸಮಿತಿ ಕಾರ್ಯಾಧ್ಯಕ್ಷ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಒ ಪೂರ್ಣಿಮಾ ಕೈಜೋಡಿಸಿದರು.

ಹಾಗೂ ಮರುದಿನ ಖ್ಯಾತ ಚಿತ್ರನಟ, ನಿರ್ಮಾಪಕ, ರಿಷಬ್ ಶೆಟ್ಟಿ ಅವರು ಕೂಡ ಯುವ ಸಂಭ್ರಮಕ್ಕೆ ಆಗಮಿಸಿದ್ದು ಅವರ ಕಾಂತಾರ ಚಲನಚಿತ್ರದ ಪ್ರೋಮೊ ಬಿಡುಗಡೆ ಮಾಡುವುದರ ಜೊತೆಗೆ" ಕನ್ನಡ ಸಿನಿಮಾವನ್ನು ಕನ್ನಡ ನೆಲದಲ್ಲಿಯೇ ಬಿಡುಗಡೆ ಮಾಡಲು ಸಾಧ್ಯವಾಗದ ವಾತಾವರಣ ಈ ಹಿಂದೆ ನಿರ್ಮಾಣವಾಗಿತ್ತು. ಆದರೆ ಇಂದು ಕನ್ನಡ ನಾಡನ್ನು ದಾಟಿ ಎಲ್ಲಾ ಕಡೆಗಳಲ್ಲಿ ಕನ್ನಡ ಸಿನಿಮಾಗಳು ಗೆಲುವು ಸಾಧಿಸುತ್ತಿರುವುದು ಸಂತಸವೇ ಸರಿ" ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಯುವ ಪ್ರತಿಭೆ ಅನಾವರಣಕ್ಕೆ ಉತ್ತಮ–ವೇದಿಕೆಯಾದ ಈ ಕಾರ್ಯಕ್ರಮದಲ್ಲಿ ಹಲ ವಾರು ರಾಜ್ಯಗಳ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳು ಆಗಮಿಸಿದ್ದು 252 ವಿದ್ಯಾಲಯಗಳು ಭಾಗವಹಿಸಿದ್ದರು. ಅದರ ಜೊತೆಗೆ 9 ರಿಂದ 10 ವಿಶೇಷಚೇತನರ ತಂಡಕ್ಕೆ ಅವಕಾಶಗಳನ್ನು ನೀಡಲಾಗಿತ್ತು. ಒಟ್ಟು ಸುಮಾರು 10000 ದಿಂದ 11000 ವರೆಗೂ ಜನ ಸಮೂಹ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

ಭಾರತ ಸ್ವಾತಂತ್ರ್ಯ ಚಳವಳಿ, ವಿಧಾನಸಭೆ ಭಾವೈಕ್ಯತೆ, ಪಾರಂಪರಿಕ ಆಸ್ತಿಗಳ ಸಂರಕ್ಷಣೆ, ಮಹಿಳಾ ಸಬಲೀಕರಣ ಮತ್ತು ಸಮಾನತೆ, ಸಂಸ್ಕೃತಿ, ಜಾನಪದ ಕಲೆ, ಪರಿಸರ ಸಂರಕ್ಷಣೆ, , ಸ್ವಚ್ಛ ಭಾರತ್ , ಮೈಸೂರು ಮಹಾರಾಜರುಗಳ ಕೊಡುಗೆ ಎಂಬ ವಿಷಯಗಳನ್ನು ಆಧರಿಸಿದ ಕಾರ್ಯಕ್ರಮಗಳನ್ನ ಪ್ರಸ್ತುತ ಪಡಿಸಲಾಗಿತ್ತು

––ದೀಕ್ಷಾ.ಎಮ್.ಭಟ್

## ಅದ್ದೂರಿ ದಸರಾದಲ್ಲಿ ಪುಸ್ತಕ ಮೇಳಕಿಲ್ಲ ಅನುದಾನ



**ಮೈಸೂರು;** ಅದ್ದೂರಿ ದಸರಾದಲ್ಲಿ ಪುಸ್ತಕ ಮೇಳಕಿಲ್ಲ ಅನುದಾನ ಯಾವುದೇ ಕಾರ್ಯಕ್ರಮ ಗಳಿರಲಿ, ಉತ್ಸವಗಳಿರಲಿ ಅಲ್ಲಿ ಪುಸ್ತಕಗಳನ್ನು ಕಾಣುತ್ತೇವೆ.ಸಾಹಿತ್ಯ ಪ್ರಿಯರಿರುವ ಮೈಸೂರಿನಲ್ಲಂತು ಪುಸ್ತಕ ಪ್ರದರ್ಶನ ಮತ್ತು ಮಾರಾಟವನ್ನು ಎತೆಚ್ಚವಾಗಿ ಕಾಣಬಹುದು. ಆದರೆ ಈ ಬಾರಿಯ ಅದ್ದೂರಿ ದಸರಾದಲ್ಲಿ ಪುಸ್ತಕ ಮೇಳ ಇಲ್ಲದಿರುವುದು ಸಾಹಿತ್ಯಾಸಕ್ತರಿಗೆ ನಿರಾಸೆ ಮೂಡಿಸಿದೆ.

ಯೋಗ ಸರಪಳಿ, ಹಾಲು ಕರೆಯುವಸ್ಪರ್ಧೆ,ಪಾರಂಪರಿಕ ಸೈಕಲ ಸವಾರಿ, ಶಿಲ್ಪ ಕಲೆ ಹೀಗೆ ಹತ್ತಾರು ಕಾರ್ಯಕ್ರಮಗಳಿರುವ ದೊಡ್ಡ ಪಟ್ಟಿಯಲ್ಲಿ ಪುಸ್ತಕ ಮೇಳವನ್ನೇ ಕೈಬಿಡಲಾಗಿದೆ

ಪ್ರತಿ ವರ್ಷವೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪುಸ್ತಕ ಮೇಳವನ್ನು ಆಯೋಜಿಸಲಾಗುತ್ತಿತ್ತು ಈ ಬಾರಿಯೂ ಪ್ರಾಧಿಕಾರ ಪುಸ್ತಕ ಮೇಳದ ಆಯೋಜನೆಗೆ 20 ಲಕ್ಷದ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟಿತ್ತು,ಆದರೆ ಉಪ ಸಮಿತಿಯ ರಚನೆಯ ಸಂದರ್ಭದಲ್ಲಿ ಪುಸ್ತಕ ಮೇಳಕ್ಕಾಗಿ ಉಪ ಸಮಿತಿಯನ್ನೇ ರಚಿಸಲಿಲ್ಲ ಹಾಗೆ ಹಣವನ್ನು ಕೂಡ ಕಾಯ್ದಿರಿಸಿಲ್ಲ. 35 ಕೋಟಿ ಕೋಟಿ ಖರ್ಚು ಮಾಡಿ ಅದ್ದೂರಿ ದಸರಾ ಮಾಡುತ್ತೇನೆ ಎಂದು ಹೇಳಿದ ಸರ್ಕಾರ ಪುಸ್ತಕ ಮೇಳಕ್ಕೆ 20 ಲಕ್ಷ ಅನುದಾನ ನೀಡದಿರುವುದಕ್ಕೆ ವ್ಯಾಪಕ ಟೀಕೆಗೆ ಗುರಿಯಾಗಿದೆ.

ಕೊರೋನಾದಿಂದಾಗಿ ಕಷ್ಟದಲ್ಲಿದ್ದ ಪ್ರಕಾಶಕರಿಗೆ ಮತ್ತು ಪುಸ್ತಕ ಮಾರಾಟಗಾರರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ

–ದೇವರಾಜ್ ವನಗೇರಿ

## ರೈತ ದಸರಾಗೆ ಚಾಲನೆ ನೀಡಿದ ಕೃಷಿ ಸಚಿವ ಬಿ.ಸಿ.ಪಾಟೀಲ್

**ಮೈಸೂರು;** ಸೆಪ್ಟೆಂಬರ್ 30ರ ರೈತ ದಸರಾದಂದು 'ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಟಿ ಸೋಮಶೇಖರ್ ಮತ್ತು ಕೃಷಿ ಸಚಿವರಾದ ಬಿಸಿ ಪಾಟೀಲ್' ರವರು ಅರಮನೆಯ 'ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ' ಬಳಿ ರೈತ ದಸರಾಗಿ ಚಾಲನೆ ನೀಡಿದರು. ನಂದಿ ಪೂಜೆ ನೆರವೇರಿಸಿ, ನಗಾರಿ ಬಾರಿಸುವ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದ ಸಚಿವ ಸೋಮಶೇಖರ ಅವರು ಪ್ರತಿ ತಾಲೂಕಿನಲ್ಲಿ ರೈತ ದಸರಾ ಆಚರಿಸಲಾಗುತ್ತಿದೆ ಎಂದು ಹೇಳಿದರು.

ನಂತರ ಕೃಷಿ ಸಚಿವರದ ಬಿಸಿ ಪಾಟೀಲ್ ರವರು ರೈತರೊಂದಿಗೆ ಒಂದು ದಿನ ಕಾರ್ಯಕ್ರಮದ ಮೂಲಕ ರೈತರ ಕಷ್ಟ ಸುಖಗಳನ್ನು ಆಲಿಸಿದ್ದಾರೆ. ಇದರ ಜೊತೆಗೆ ರೈತರಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ ಎಂದರು. ನಂತರ ಸಚಿವ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಸಾಗಿದ್ದು, ಪೂರ್ಣ ಕುಂಭ, ಗಿರಿಜನ ನೃತ್ಯ, ಕೀಲುಗೊಂಬೆ, ಮಂಗಳವಾದ್ಯ, ಡೊಳ್ಳು ಕುಣಿತ ಸೇ–ರಿದಂತೆ ವಿವಿಧ ಪ್ರಕಾರದ ಜಾನಪದ ಕಲಾತಂಡಗಳು ಭವ್ಯ ಮೆರವಣಿಗೆಯಲ್ಲಿ ಸಾಗಿದವು.

ಈ ಕಾರ್ಯಕ್ರಮದಲ್ಲಿ ಕಲಬುರ್ಗಿ, ಚಿತ್ರದುರ್ಗ, ವಿಜಯನಗರ ಹೀಗೆ ಹಲವಾರು ಜಿಲ್ಲೆಗಳು ಮತ್ತು ತಾಲೂಕುಗಳಿಂದ ರೈತ ಸಂಪರ್ಕ ಕೇಂದ್ರದ ಹಲವಾರು ಸದಸ್ಯರು ಇಲ್ಲಿ ಉಪಸ್ಥಿತರಿದ್ದನ್ನು ಕಾಣಬಹುದು. ಇವುಗಳ ಜೊತೆಗೆ ತಲೆಯ ಮೇಲೆ ತರಕಾರಿ ಬುಟ್ಟಿ ಹೊತ್ತಿರುವ ಹೆಂಗಸು ಮತ್ತು ಹೆಗಲ ಮೇಲೆ ಬಾಳೆಹಣ್ಣಿನ ಗೊನೆ ಹಿಡಿದಿರುವ ಅಪ್ಪಟ ಗ್ರಾಮೀಣ ಕುಟುಂಬದ ಕಲಾಕೃತಿ ಬೊಂಬೆಗಳನ್ನು ನಿಲ್ಲಿಸಲಾಗಿತ್ತು ಹಲವಾರು ಧಾನ್ಯಗಳು ಮತ್ತು ಪುಷ್ಪಗಳಿಂದ ಕಲಾತವಾಗಿ ರಂಗೋಲಿಗಳನ್ನು ಬಿಡಿಸಲಾಗಿತ್ತು

–ಪುಷ್ಪಲತಾ

## ಮೈಸೂರು ಅರಮನೆಯಲ್ಲಿ ಆಯುಧ ಪೂಜೆ



**ಮೈಸೂರು;** ಖಾಸಗಿ ದರ್ಬಾರ್ ಸಂಜೆಗೆ ಮುಕ್ತಾಯ ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೈಸೂರು ಅರಮನೆಯಲ್ಲಿ ನಡೆದ ಆಯುಧ ಪೂಜಾ ಕೈಂಕರ್ಯಗಳಲ್ಲಿ ಬೆಳಗಿನಿಂದಲೇ ಭಾಗವಹಿಸಿದ್ದರು.ಅರಮನೆಯಲ್ಲಿ ಆಯುಧ ಪೂಜೆ ಸಂಭ್ರಮಅರಮನೆಯಲ್ಲಿ ಆಯುಧ ಪೂಜೆ ಸಂಭ್ರಮಬೆಳಗ್ಗೆಯಿಂದಲೇ ಅರಮನೆಯಲ್ಲಿ ಶರನ್ನವರಾತ್ರಿಯ 9ನೇ ದಿನ ಆಯುಧ ಪೂಜೆ ಧಾರ್ಮಿಕ ಕೈಂಕರ್ಯಗಳು ನಡೆದವು.

ಬೆಳಗ್ಗೆ 6 ರಿಂದ ಚಂಡಿಕಾ ಹೋಮ ನಡೆದು 9 ಗಂಟೆಗೆ ಹೋಮ ಪೂರ್ಣವತಿ ಆಯಿತು. 10.30 ರ ಸುಮಾರಿಗೆ ಮತ್ತೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸುವನ್ನು ಆನೆ ಬಾಗಿಲಿಗೆ ತ ರಲಾಗಿತ್ತು. ಆ ನಂತರ ಆನೆ ಬಾಗಿಲಿನ ಮೂಲಕ ಕಲ್ಯಾಣ ಮಂಟಪದ ಒಳಗೆ ತೆರಳಿ ಖಾಸಗಿ ಆಯುಧಗಳಿಗೆ ಪೂಜೆ ಸಲ್ಲಿಸಲಾಯಿತು.

ನಂತರ ರಾಜ ವಂಶಸ್ಥರು ಪಟ್ಟದ ಆನೆ, ಹಸು, ಕುದುರೆ, ಒಂಟೆ, ಪಲ್ಲಕ್ಕಿ ಹಾಗೂ ಅವರು ಬಳಸುವ ಐಷಾರಾಮಿ ಕಾರುಗಳಿಗೆ ಪೂಜೆ ಸಲ್ಲಿಸಿದರು. ಅರಮನೆಯಲ್ಲಿ ಆಯುಧ ಪೂಜೆ ಸಂಭ್ರಮ ಮನೆ ಮಾಡಿತ್ತು. ಬೆಳಗ್ಗೆ 11.02 ನಿಮಿಷದಿಂದ 11.25ರವರೆಗೆ ಆಯುಧ ಪೂಜೆ ನೆರವೇರಿಸಲಾಗಿದೆ. ಸಂಜೆ ರಾಜ ವಂಶಸ್ಥರು ರತ್ನಖಚಿತ ಸಿಂಹಾಸನದಲ್ಲಿ ಖಾಸಗಿ ದರ್ಬಾರ್ ನಡೆಸಿ ಸಿಂಹಾಸನದಿಂದ ಸಿಂಹವನ್ನು ವಿಸರ್ಜನೆ ಮಾಡುತ್ತಾರೆ. ಆ ನಂತರ ಕಂಕಣ ವಿಸರ್ಜನೆ ಮಾಡಲು ರಾಜ ವಂಶಸ್ಥರು ದೇವರ ಮನೆಗೆ ಬಂದು, ರಾತ್ರಿ ಸಂಪ್ರದಾಯದ ರೀತಿಯಲ್ಲಿ ಅರಮನೆ ಒಳಗಿನ ದೇವರ ಮನೆಯಲ್ಲಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

–ರಾಕೇಶ ಡಿ. ಎಂ

## ಆಹಾ ಈ ಜನುಮವೇ ದೊರಕಿದೆ ರುಚಿ ಸವಿಯಲು

**ಮೈಸೂರು;**ಈ ಬಾರಿಯ ದಸರಾ ಆಹಾರ ಮೇಳ ಆಹಾರ ಪ್ರಿಯರಿಗೆ ರೋಮಾಂಚನಕಾರಿ ಮತ್ತು ತುಟಿಯ ಅಡುಗೆ ಪ್ರಯಾಣವಾಗಿದೆ. ಬೆಳಗ್ಗೆ ಸುಮಾರು 11 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಜನರು ತಟ್ಟೆಯಲ್ಲಿರುವ ಖಾದ್ಯಗಳನ್ನು ತಿನ್ನುತ್ತಿದ್ದಾರೆ.

ಡಿಸಿ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ 113 ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ಲಲಿತ ಮಹಲ್ ಪ್ಯಾಲೇಸ್ ಬಳಿಯ ಮುಡಾ ಮೈದಾನದಲ್ಲಿ 70ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿದೆ.

ಆಹಾರಪ್ರಿಯರಿಗಾಗಿ ಗ್ಯಾಸ್ಟ್ರೊನೊಮಿಕ್ ಡಿಲೈಟ್‌ಗಳನ್ನು ಪರಿಚಯಿಸಲಾಗಿದೆ ಮತ್ತು ಹಿಂದಿನ ವರ್ಷಗಳಂತೆ ಈ ವರ್ಷದ ಮೇಳದ ಪ್ರಮುಖ ಅಂಶವೆಂದರೆ ಬಿದಿರಿನ ಬಿರಿಯಾನಿ, ಬಿದಿರಿನ ರೈಸ್ ಖೀರಾ ಮತ್ತು ಏಡಿ ಭಕ್ಷ್ಯಗಳಂತಹ ಬುಡಕಟ್ಟು ಆಹಾರ.ಬಿದಿ–ರಿನ ಕಾಂಡದಿಂದ ಬೇಯಿಸಿದ ಬಿದಿರಿನ ಬಿರಿಯಾನಿ, ಮತ್ತು 'ಮಕಲಿ ಬೇರು' ಚಹಾ,



ಕಾಡುಗಳಲ್ಲಿ ಬೆಳೆಯುವ ವಿವಿಧ ಗೆಡ್ಡೆಗಳು, ಹಸಿರು ಎಲೆಗಳಿಂದ ಮಾಡಿದ ಭಕ್ಷ್ಯಗಳು ಮತ್ತು ಬಿದಿರಿನ ಚಿಗುರುಗಳನ್ನು ಬಳಸಿ ತಯಾರಿಸಿದ ಆಹಾರ ಪದಾರ್ಥಗಳು ಪ್ರಮುಖ ಆಕರ್ಷಣೆಗಳಾಗಿವೆ. ಜನುನವೇ ಆಹಾರ ದೊರಕಿದೆ ರುಚಿ ಸವಿಯಲು ಈ ಜನುನವೇ ಆಹಾ ದೊರಕಿದೆ ರುಚಿ ಸವಿಯಲು.

–ರಂಜೀತಾ ಎನ್,ಆರ್


**ಪ್ರಧಾನ ಸಂಪಾದಕರು – ಡಾ. ಸಿ. ಕೆ. ಪುಟ್ಟಸ್ವಾಮಿ**
ಮುಖ್ಯಸ್ಥರು ಪತ್ರಿಕೋದ್ಯಮ ಮತ್ತು ಸಮೂಹ
ಸಂವಹನ ವಿಭಾಗ ಮೈಸೂರು ವಿವಿ

**ಸಂಪಾದಕರು –ಡಾ.ಎನ್ ಮಮತ**
ಸಹ ಪ್ರಾಧ್ಯಾಪಕರು ಪತ್ರಿಕೋದ್ಯಮ ಮತ್ತು ಸಮೂಹ
ಸಂವಹನ ವಿಭಾಗ ಮೈಸೂರು ವಿವಿ

**ವರದಿಗಾರರು** – ಪತ್ರಿಕೋದ್ಯಮ ಮತ್ತು ಸಮೂಹ
ಸಂವಹನ ವಿಭಾಗದ ವಿದ್ಯಾರ್ಥಿಗಳು ಮೈಸೂರು ವಿ ವಿ

**ಪುಟ ವಿನ್ಯಾಸಕರು**–ಹೃತಿನ್ ಎಚ್.ಪಿ , ಭೀಮಸಿ ಎಂ. ಕೆ, ದೇವರಾಜ ವನಗೇರಿ